The question of sanctioning the higher scales of pay as represented by them has to be examined with reference to the financial implications involved and having regard to the pay scales given to the other technical and professional graduates.

As regards their request to grant them the minimum pay during the probationary period, this request cannot be conceded as the provisions in the Probationary (Pay) Rules are common to all the Departments in the State.

In regard to the third request regarding change of their designation there will be no difficulty and Government will consider this.

PAPERS LAID ON THE TABLE

SRI RAMAKRISHNA HEGDE (Minister for Finance).—Sir, I beg to lay on the Table Notification No. HD 59, EFL 62, dated 9th December 1965 [The Mysore Prohibition (Liquor) Rules, 1965], as required under Section 125 of the Mysore Prohibition Act 1961.

MR. SPEAKER.—The Notification is laid on the Table.

SUPPLEMENTARY DEMAND FOR GRANTS FOR 1965-66 (SECOND INSTALMENT).

MR. SPEAKER.—Before calling upon Sri B. Bhaskar Shetty to speak, I wish to inform the House that out of 3 hours allotted, one hour and twenty minutes are over and only 1 hour and 40 minutes are available. All those who want to participate have to bear it in mind. I will not stifle the debate but members cannot get all the time they want, particularly in times of pressure like this.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ವೆಟರಿನರಿ ವಿದ್ಯಾರ್ಥಿಗಳು ವಿಧಾನಸೌಧದ ಮುಂದೆ ಉಪವಾಸ ಮುಷ್ಕರವನ್ನು ಹೂಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಭರವಸೆಯನ್ನು ಕೊಟ್ಟು ಈಗ ಟೆಕ್ನಿಕಲ್ ಗ್ರಾಜುಯೇಟುಗಳ ಪ್ರಶ್ನೆ ಬೇರೆ ಇದೆ ಈ ಎರಡನ್ನು ಒಟ್ಟಿಗೆ ಸಾಲ್ವ್ ಮಾಡಬೇಕು ಎಂದು ಹೇಳಿದ್ದರು. ಈ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸಹಾನುಭೂತಿಯನ್ನು ಹೊಂದಿದ್ದಾರೆ. ಆದ್ದರಿಂದ ಇವರ ಬಗ್ಗೆ ಮತ್ತು ಅಗ್ರಿಕಲ್ಚರಲ್ ಗ್ರಾಜುಯೇಟುಗಳ ಬಗ್ಗೆ ತೀವ್ರವಾಗಿ ವಿಚಾರ ಮಾಡಬೇಕು ಎಂದ ನಾನು ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಮಾನ್ಯ ಸಭಾಪತಿಯವರೇ, ಮಾನ್ಯ ಹಣಕಾಸಿನ ಸಚಿವರು ಸಭೆಯ ಮುಂದೆ ಮಂಡಿಸಿರುವ 3½ ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಡಿಮ್ಯಾಂಡ್ ನಂಬರ್ 10ರಲ್ಲಿ ಆರ್ಥಿಕ ಸಲಹೆಗಾರರೊಬ್ಬರನ್ನು ನೇಮಕ ಮಾಡಿಕೊಂಡಿರುವುದರಿಂದ ಅವರಿಗೆ ಒಂದು ತಿಂಗಳಿಗೆ 2,700 ರೂಪಾಯಿಗಳಂತೆ ಸಂಬಳವನ್ನು ಕೊಡಲು 13,500 ರೂಪಾಯಿಗಳಿಗೆ ಈ ಸಭೆಯು ಮಂಜೂರಾತಿಯನ್ನು ಕೇಳಿದ್ದಾರೆ. ಆದು ತಿಂಗಳಿಗೆ 2,700 ರೂಪಾಯಿಗಳ ಸಂಬಳವನ್ನು ಕೊಟ್ಟು ಒಬ್ಬರು ಆರ್ಥಿಕ ಸಲಹೆಗಾರರನ್ನು ಸರ್ಕಾರದವರು ನೇಮಕೆ ಮಾಡಿಕೊಂಡಿರುವುದು ನಿಜವಾಗಿಯೂ ನನಗೆ ಬಹಳ ಹಾಸ್ಯಾಸ್ಪದವಾಗಿ ಕಾಣುತ್ತಿದೆ. ಈಗ ನಮ್ಮ ರಾಜ್ಯದಲ್ಲಿ ಆರ್ಥಿಕ ಸಲಹೆಗಾರರನ್ನು ನೇಮಕ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ನನಗೆ ಅನಿಸುತ್ತದೆ. ಈಗ ಅದು ನಮಗೆ ಮೋಸ ಮಾಡಿದಂತಾಗುತ್ತದೆ. ಈಗಲೇ

(ಶ್ರೀ ಬಿ. ಭಾನ್ಮರ ಶೆಟ್ಟಿ)

ನಾವು ಋಣಬಾಧೆಯಿಂದ ನರಳುತ್ತಿದ್ದೇವೆ.—ಇಂಥಾ ಸಮಯದಲ್ಲಿ ತಿಂಗಳಿಗೆ 2,700 ರೂಪಾಯಿಗಳ ಸಂಬಳವನ್ನು ಕೊಟ್ಟು ಒಬ್ಬರು ಆರ್ಥಿಕ ಸಲಹೆಗಾರರನ್ನು ನೇಮಕ ಮಾಡಿಕೊಂಡಿದ್ದಾರೆ ಎಂದರೆ ಇದು ನನಗೆ ಅರ್ಥ ವಾಗುವುದಿಲ್ಲ. ಈಗಾಗಲೇ ನಮ್ಮ ಖಜಾನೆ ಖಾಲಿಯಾಗಿದೆ. ಸಾಧಾರಣವಾಗಿ ನಮ್ಮ ಸರ್ಕಾರದವರು 315 ಕೋಟಿ ರೂಪಾಯಿಗಳನ್ನು ಸಾಲ ಮಾಡಿದ್ದಾರೆ. ಹಣಕ್ಕೆ ಕೊಡಬೇಕಾದ 13½ ಕೋಟಿ ರೂಪಾಯಿಗಳ ಬಡ್ಡಿಯನ್ನು ಕೊಡುವುದಕ್ಕೆ ಆಗದೇ ದಿವಾಳಿ ತೆಗೆಯುವ ಪರಿಸ್ಥಿತಿಯಲ್ಲಿರುವಾಗ 2,700 ರೂಪಾಯಿಗಳ ಸಂಬಳವನ್ನು ಕೊಟ್ಟು ಆರ್ಥಿಕ ಸಲಹೆಗಾರರನ್ನು ನೇಮಕ ಮಾಡಿಕೊಳ್ಳುವ ಅವಶ್ಯಕತೆ ಏನಿತ್ತು ಎಂದು ನಾನು ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ. ಇದರ ಜೊತೆಗೆ ಅವರಿಗೆ ಬೇಕಾಗಿರತಕ್ಕ ಸ್ಟಾಫ್ ಮತ್ತು ಇತರ ಸಲಕರಣೆಗಳನ್ನು ಒದಗಿಸುವುದಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತಾರೆಯೋ ದೇವರಿಗೇ ಗೊತ್ತು. ಇಂಥಾ ಒಂದು ಅವಕಾಶವನ್ನು ಇಲ್ಲಿ ಏತಕ್ಕೆ ಕಲ್ಪಿಸಬೇಕಾಗಿತ್ತು ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಒತ್ತಾಯವಾಗಿ ಕೇಳುತ್ತೇನೆ. ಮಾತ್ರವಲ್ಲದೆ ಈ ತನಕವೂ ಆರ್ಥಿಕ ಸಲಹೆಗಾರರು ಇಲ್ಲದೆ ಇದ್ದು ಈಗ ಹೊಸ ಆರ್ಥಿಕ ಮಂತ್ರಿಗಳು ಬಂದಾಗ ಆರ್ಥಿಕ ಸಲಹೆಗಾರರನ್ನು ನೇಮಕ ಮಾಡಿದ್ದಾರೆ. ಹೊಸ ಹೊಸ ಆರ್ಥಿಕ ಮಂತ್ರಿಗಳಿಗೆ ಆರ್ಥಿಕ ಜ್ಞಾನವಿಲ್ಲದಿದ್ದರೆ ಮಾನ್ಯ ಮುಖ್ಯ ಮುಂತ್ರಿಗಳು ಅವರ ಅರ್ಥ ಖಾತೆಯನ್ನು ತೆಗೆದು ಆರ್ಥಿಕ ಜ್ಞಾನವಿರುವ ಬೇರೊಬ್ಬರಿಗೆ ಕೊಡಲಿ, ಆರ್ಥಿಕ ತಜ್ಞರ ವ್ಯಾಪಾರಕ್ಕೆ ಹೋಗುವುದು ಬೇಡ. ಈಗಾಗಲೇ ನಮ್ಮ ದೇಶದ ಜನಗಳ ಮೇಲೆ ಸಾಕಷ್ಟು ತೆರಿಗೆಗಳ ಹೊರೆಯನ್ನು ಹಾಕಿ ಜನಗಳು ನರಳುತ್ತಿದ್ದಾರೆ, ಈ ದೃಷ್ಟಿಯಿಂದ ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುವವರೆಗೆ ಈ ಆರ್ಥಿಕ ಸಲಹೆಗಾರರನ್ನು ವಾಪಸ್ಸು ಕಳುಹಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನೊಂದು ವಿಷಯ : ಸರ್ಕಾರದವರು ತಮ್ಮ ರಾಜಕೀಯ ದೃಷ್ಟಿಯನ್ನು ಇಟ್ಟುಕೊಂಡು ತಮ್ಮ ರಾಜಕೀಯ ಮಿತ್ರರನ್ನು ಸಂತೈಸುವುದಕ್ಕಾಗಿ ತಾಲ್ಲೂಕುಗಳನ್ನು ಬೆಳೆಸುತ್ತಾ ಹೋಗುತ್ತಿರುತ್ತಾರೆ. ಈಗ ಉದಾಹರಣೆಗೆ ಹೇಳುವುದಾದರೆ ಡಿಮ್ಯಾಂಡ್ ನಂಬರ್ 10ರಲ್ಲಿ ಹೇಳಿರುವ ಹಾಗೆ ಬೀದರ್ ಜಿಲ್ಲೆಯಲ್ಲಿ ಬಸವ ಕಲ್ಯಾಣ ಎಂಬ ಒಂದು ಹೊಸ ತಾಲ್ಲೂಕನ್ನು ನಿರ್ಮಾಣ ಮಾಡಿದ್ದಾರೆ. ಈಗ ಅದಕ್ಕೆ 30 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಬೇಕಾಗಿದೆ, 1962ನೇ ಇಸವಿಯಲ್ಲಿ ಎ. ಜಿ. ರಾಮಚಂದ್ರರಾಯರು ಕೊಟ್ಟಂತಹ ವರದಿಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಆದರಲ್ಲಿ ಈಗಿರುವ ಜಿಲ್ಲೆ ಮತ್ತು ತಾಲ್ಲೂಕುಗಳು ಹೆಚ್ಚಾಗಿವೆ, ಆದಷ್ಟು ಮಟ್ಟಿಗೆ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಕಡಿಮೆಮಾಡಬೇಕು, 4 ಡಿವಿಜನ್ ಇರುವುದನ್ನು 3 ಡಿವಿಜನ್ ಮಾಡಬೇಕು, 19 ಜಿಲ್ಲೆಗಳಿರುವುದನ್ನು 15 ಜಿಲ್ಲೆಗಳಾಗಿ ಮಾಡಬೇಕು, 171 ತಾಲ್ಲೂಕುಗಳಿರುವುದನ್ನು 120 ತಾಲ್ಲೂಕುಗಳಾಗಿ ಮಾಡಬೇಕು, ಎಂದು ಹೇಳಿದ್ದಾರೆ. ಇದು ಹೇಗಾಗಿದೆ ಎಂದರೆ ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು ಎಂದು ಹೇಳುವ ಹಾಗಾಗಿದೆ. ಸರ್ಕಾರದವರು ರಾಜಕೀಯ ಒತ್ತಡದಿಂದ, ತಮ್ಮ ರಾಜಕೀಯ ಮಿತ್ರರನ್ನು ಸಂತೈಸುವುದಕ್ಕಾಗಿ ತಾಲ್ಲೂಕುಗಳನ್ನು ಹೆಚ್ಚು ಮಾಡುತ್ತಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಇಂಥಾ ಕೆಟ್ಟ ಹವ್ಯಾಸಕ್ಕೆ ಹೋಗಬಾರದು ಮತ್ತು ರಾಜಕೀಯ ದೃಷ್ಟಿಯನ್ನು ಇಟ್ಟುಕೊಳ್ಳಬಾರದು, ಆದ್ದರಿಂದ ಈಗ ಹೆಚ್ಚುವರಿ ಮಾಡಿರುವ ತಾಲ್ಲೂಕುಗಳನ್ನು ಆದಷ್ಟು ಕಡಿಮೆ ಮಾಡ ಬೇಕೆಂದು ನಾನು ಒತ್ತಾಯ ಮಾಡಿ ಈ ಹೆಚ್ಚುವರಿ ತಾಲ್ಲೂಕಿನ ಸಂಬಂಧದಲ್ಲಿ ಕೇಳಿರುವ 30 ಸಾವಿರ ರೂಪಾಯಿಗಳಿಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತೇನೆ. ಆ ಮೇಲೆ ಹಾಗೆಯೇ ಸೌತ್ ಕೆನರಾದಲ್ಲಿ ಸೂಳ್ಯ ಒಂದು ತಾಲ್ಲೂಕನ್ನು ಹೆಚ್ಚುಮಾಡಿದ್ದಾರೆ. ಹೀಗೆ ಕಾಂಗ್ರೆಸ್ ಮಿತ್ರರನ್ನು ಸಂತೈಸುವುದಕ್ಕಾಗಿ ತಾಲ್ಲೂಕುಗಳನ್ನು ಹೆಚ್ಚುಮಾಡಿ ರಾಜಕೀಯವನ್ನು ಬೆಳಸಿಕೊಂಡು ಹೋಗುತ್ತಿದ್ದಾರೆ. ಅದಕ್ಕೆ ನಾನು ನನ್ನ ಒಪ್ಪಿಗೆಯನ್ನು ಕೊಡುವುದಿಲ್ಲ.

ಇನ್ನು ಡಿಮ್ಯಾಂಡ್ ನಂಬರ್ 20ರಲ್ಲಿ ಒಂದು ಕಡೆ ವ್ಯವಸಾಯಕ್ಕೆ ಬೇಕಾದ ಪಂಪು ಸೆಟ್ಟುಗಳನ್ನು ಕೊಂಡುಕೊಳ್ಳುವುದಕ್ಕಾಗಿ 45 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಇದು ಸೂಂತೋಷದ ವಿಷಯ. ಡೀಸೆಲ್ ಪಂಪು ಸೆಟ್ಟುಗಳನ್ನು ಸರ್ಕಾರದವರು ಕೊಂಡುಕೊಳ್ಳುವಾಗ ತಮ್ಮ ಜನರು ಯಾರು ಯಾರು ಇದ್ದಾರೆ, ಯಾರು ಯಾರಿಗೆ ಕಮಿಷನ್ ಸಿಕ್ಕಬೇಕು ಎನ್ನುವ ದೃಷ್ಟಿಯನ್ನು ಇಡದೆ ಟೆಂಡರ್ ಕಾಲ್‌ಫಾರ್ ಮಾಡಿ ಎಲ್ಲಿ ಒಳ್ಳೆಯ ಪಂಪು ಸೆಟ್ಟು ಸಿಕ್ಕುತ್ತದೆಯೋ ಅದನ್ನು ತೆಗೆದುಕೊಂಡು ರೈತರಿಗೆ ಕೂಡಬೇಕೇ ವಿನಾ 70 ಜನಗಳು ಹೊತ್ತುಕೊಂಡು ಹೋಗುವುದಕ್ಕೆ ಆಗದೇ ಇರುವ, ಸ್ಪೇರ್ ಪಾರ್ಟ್ಸ್ ಸಿಕ್ಕದೇ ಇರುವ, 5-6 ತಿಂಗಳು ಕೂಡ ನೀರು ಎಳೆಯುವ ಕೆಲಸವನ್ನು ಮಾಡದೇ ಇರುವ ರಷ್ಯನ್ ಪಂಪು ಸೆಟ್ಟುಗಳನ್ನು ತೆಗೆದುಕೊಳ್ಳಬೇಡಿ. ಮತ್ತು ರೈತರಿಗೆ ಯಾವ ತರಹ ಪಂಪು ಸೆಟ್ಟುಗಳನ್ನು ಕೊಟ್ಟರೆ ಅವರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂಬುದನ್ನು ನೋಡಿಕೊಂಡು ಸರ್ಕಾರದವರು ಪಂಪು ಸೆಟ್ಟುಗಳನ್ನು ಕೊಂಡುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತಾವು ಈಗ ಎಲೆಕ್ಟ್ರಿಸಿಟಿ ಪಂಪು ಸೆಟ್ಟುಗಳನ್ನು ಕೊಡುತ್ತಿದ್ದೀರಿ. ಆದರೆ ಪಂಪ್ಸುಗಳನ್ನು ಕೊಡುವ ಜಾಗದಲ್ಲಿ ಎಲೆಕ್ಟ್ರಿಸಿಟಿಯನ್ನೇ ಕೊಡುತ್ತಿಲ್ಲ. ಹಾಗಾದರೆ ಪಂಪ್ಸುಗಳನ್ನು ಬಳಸುವುದಾದರೂ

ಹೇಗೆ ? ಎಲೆಕ್ಟ್ರಿಸಿಟಿ ಸಿಗದೆ ಮತ್ತು ಅದಕ್ಕೆ ಬೇಕಾದ ಲೈನು ಸಿಗದೇ-ಇದ್ದರೆ ಅದರಿಂದ ಜನಕ್ಕೆ ಉಪಯೋಗವಾಗುವುದಿಲ್ಲ. ಅದಕ್ಕಾಗಿ ಪಂಪು ಸೆಟ್ಟುಗಳನ್ನು ಕೊಡುವುದಕ್ಕಿಂತ ಆ ಭಾಗಗಳಲ್ಲಿ ಬೇಕಾಗುವ ವೈರುಗಳು ಇತರ ಸಾಮಾನುಗಳನ್ನು ಸಿದ್ಧಮಾಡಿಕೊಂಡು ಲೈನು ಎಳೆದು ಆನಂತರವಲ್ಲಿ ಎಲೆಕ್ಟ್ರಿಸಿಟಿ ಪಂಪುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಕಡೆ ಪಂಪುಸೆಟ್ಟುಗಳನ್ನು ಕೊಟ್ಟಿದ್ದಾರೆ. ಆದರೆ ಅಲ್ಲಿಗೆ ಎಲೆಕ್ಟ್ರಿಸಿಟಿ ಕೊಟ್ಟಿಲ್ಲ.

ಇನ್ನೊಂದು ವಿಷಯ ; ಇಲ್ಲಿ ಈ ತುರ್ತು ಪರಿಸ್ಥಿತಿಯಲ್ಲಿ ಆಹಾರದ ಉತ್ಪಾದನೆ ಹೆಚ್ಚುಮಾಡಬೇಕೆಂದು ಮೆಕನೈಸ್ಡ್ ಫಿಷಿಂಗ್ ಬೋಟುಗಳೆಂದು ಅವನ್ನು ಕೊಡಲು ಸುಮಾರು 5 ಲಕ್ಷದಷ್ಟು ಹಣ ಬೇಕೆಂದು ಇಲ್ಲಿ ಕೇಳಿದ್ದಾರೆ. ಇದರಲ್ಲಿ ನನಗಾದರೂ ತೋರುತ್ತಿರುವುದು ಯಾರು ಯಾರು ಸಮುದ್ರಕ್ಕೆ ಹೋಗಿ ಮೀನು ತರಲು ತಕ್ಕ ವ್ಯವಸಾಯ ಮಾಡುತ್ತಿದ್ದಾರೋ ಅಂತಹವರ ಅನುಕೂಲಕ್ಕಾಗಿ ಈ ಬೋಟುಗಳನ್ನು ಕೊಡಬೇಕೆಂದು ಇದೆ. ಆದರೆ ಇಲ್ಲಿ ನಾವು ನೋಡಿದರೆ ಯಾರು ಹುಟ್ಟಿದಾರಭ್ಯ ಸಮುದ್ರವನ್ನೇ ನೋಡದೆ ಬರೀ ಮೀನಿನ ವ್ಯಾಪಾರದಲ್ಲಿ ತೊಡಗಿದ್ದಂತಹವರಿಗೆ ಮಾತ್ರ ಮೆಕನೈಸ್ಡ್ ಫಿಷಿಂಗ್ ಬೋಟನ್ನು ಕೊಡುತ್ತಿದ್ದಾರೆ. ನಿಜವಾಗಿ ಇದೇ ಮೀನಿನ ಕಸಬಿನಲ್ಲಿ ಯಾರು ಇದ್ದಾರೋ ಅಂತಹವರಿಗೆ ಈ ದೋಣಿಗಳು ಸಿಗುತ್ತಿಲ್ಲ. ಇದರಿಂದ ಬಡ ಜನರಿಗೆ ಯಾವ ಸೌಲಭ್ಯಗಳೂ ದೊರಕದೆ ಜನರಿಗೆ ತೊಂದರೆಯಾಗುತ್ತಿದೆ. ಇದರ ಕಡೆಗೆ ಸರಕಾರ ಲಕ್ಷ್ಯ ಕೊಡುವುದು ಅವಶ್ಯಕ.

ಇನ್ನು ಡಿಮ್ಯಾಂಡು 27ರಲ್ಲಿ ಗೋವಾ ಹಾಗೂ ಮರ್ಮಗೊವದಲ್ಲಿ ಟೂರಿಸ್ಟ್ ಆಫೀಸುಗಳನ್ನು ಮಾಡಲಿಕ್ಕೆಂದು ಇಲ್ಲಿ ಹಣ ಕೇಳಿದ್ದಾರೆ. ಇದು ಹೇಗಿದೆ ಎಂದರೆ ಮನೆಯಲ್ಲಿ ಮಹಾಮಾರಿ ಇಟ್ಟು ಕೊಂಡು ಮೈದಾನಕ್ಕೆ ಹೋಗಿ ಬೇರೆಯವರಿಗೆ ಏನೋ ಮಾಡಬೇಕೆನ್ನುವ ಗಾದೆಯಂತೆ ತಾವು ಇಲ್ಲಿ ಹೊರಗಿನವರಿಂದ ಹೊಗಳಿಸಿಕೊಳ್ಳಲು ಇಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದೀರಿ. ಕೋಟ್ಯಾಂತರ ಜನರು ಅನ್ನವಿಲ್ಲದೆ ಬಹಳವಾಗಿ ತೊಂದರೆ ಪಡುತ್ತಿರುವ ಈ ಕಾಲದಲ್ಲಿ ನಮ್ಮ ರಾಜ್ಯದಲ್ಲಿ ಯಾರು ನಿಮ್ಮನ್ನು ಹೊಗಳುವುದಿಲ್ಲ ಎಂದು ಹೊರಗಡೆ ಹೋಗಿ ಗೋವಾ ಹಾಗೂ ಮರ್ಮಗೋವಾಗಳಲ್ಲಿ ಟೂರಿಸ್ಟು ಆಫಿಸುಗಳನ್ನು ಮಾಡಿ ಅವರಿಂದ ಹೊಗಳಿಕೆ ಪಡೆಯುವುದಕ್ಕಾಗಿ ಮಾಡುತ್ತಿದ್ದೀರಿ, ಇದು ಸರಿಯೇ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ದೇಶದಲ್ಲಿ ಜನ ಅನ್ನಸುಕಟದಿಂದ ಬಳಲುತ್ತಿರುವಾಗ ಸರಕಾರ ಇಂತಹ ಕೆಲಸಗಳಿಗೆಲ್ಲಾ ಹಣವನ್ನು ವೆಚ್ಚ ಮಾಡಬಾರದು, ಆದರಿಂದ ನಾನು ಈ ಮೇಲೆ ಹೇಳಿದ ಡಿಮ್ಯಾಂಡುಗಳನ್ನು ಇಲ್ಲಿ ವಿರೋಧ ಮಾಡುತ್ತೇನೆ.

ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸ್ವಾಮೀ, ನಮ್ಮ ಮುಂದೆ ತಂದಿರತಕ್ಕ ಈ ಸಪ್ಲಿಮೆಂಟರಿ ಎಸ್ಟಿಮೇಟುಗಳನ್ನು ವಿರೋಧ ಮಾಡುತ್ತಾ ಸರಕಾರಕ್ಕೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸಭೆಯಲ್ಲಿ ಕೋರಂ ಇಲ್ಲ.

MR. DEPUTY SPEAKER.—Bell may be rung to have the quorum.

(*Bell was rung and there was quorum*).

ಶ್ರೀ ಬಿ. ಬೈರಪ್ಪಾಜಿ.—ಇಂತಹ ಕಷ್ಟ ಪರಿಸ್ಥಿತಿಯಲ್ಲಿ ದೇಶದ ಜನಕ್ಕೆ ಆಹಾರವೇ ಇಲ್ಲದಿರುವಾಗ ಆಹಾರವನ್ನು ಹೆಚ್ಚು ಉತ್ಪತ್ತಿಮಾಡಲು ಸಾಕಷ್ಟು ಹೆಚ್ಚುವರಿ ಹಣಬೇಕೆಂದು ಕೇಳದೇ ಯಾವ ಯಾವುದೋ ಬಾಬುಗಳಿಗಾಗಿ ಇಲ್ಲಿ ಹಣಬೇಕೆಂದು ಕೇಳುವುದಕ್ಕಿಂತ ಆಹಾರಕ್ಕಾಗಿ ಎಂದು ಕೇಳಿದ್ದರೆ ಅದನ್ನು ನಾವು ಒಪ್ಪಬಹುದಾಗಿತ್ತು. ಇದರಲ್ಲಿ ನಾವು ನೋಡುವಂತೆ ರಾಜ್ಯಪಾಲರ ವಸತಿಗಳಿಗಾಗಿ ಸುಮಾರು ಒಂದು ಲಕ್ಷ ಹಾಗೂ ಇನ್ನೂ ಅನೇಕ ಬಾಬುಗಳಿಗಾಗಿ ವೆಚ್ಚಮಾಡಬೇಕೆಂದು ನಮ್ಮ ಒಪ್ಪಿಗೆ ಪಡೆಯಲು ತಂದಿದ್ದಾರೆ. ಇದಕ್ಕೆ ಆಹಾರದ ಮುಗ್ಗಟ್ಟನ್ನು ಎದುರಿಸುವುದಕ್ಕಾಗಿ ಇಲ್ಲಿ ಯಾವುದಾದರೂ ಒಂದು ಯೋಜನೆ ತಯಾರುಮಾಡಿ ಅದಕ್ಕೆ ಒಪ್ಪಿಗೆಯನ್ನು ಕೇಳಿದ್ದರೆ ಚೆನ್ನಾಗಿರುತ್ತಿತ್ತು ಎಂದು ನಾನು ಇಲ್ಲಿ ಹೇಳುತ್ತೇನೆ ನಿನ್ನೆ ದಿನ ಮಾನ್ಯ ಸದಸ್ಯರಾದ ಶ್ರೀಮಾನ್ ಸಿ. ಜೆ. ಮುಕ್ಕಣ್ಣಪ್ಪನವರು ಒಂದು ಪ್ರಶ್ನೆ ಕೇಳಿದಾಗ ಅದರಲ್ಲಿ ಒಬ್ಬ ಕಂಟ್ರಾಕ್ಟರಿಗಾಗಿ ಎಂದರೆ ಲಾರ್ಸನ್ ಟೂಬರೊ ಲಿಮಿಟೆಡ್ ಇವರಿಗಾಗಿ ಸುಮಾರು ಆರು ಲಕ್ಷ ರೂಪಾಯಿಗಳಷ್ಟು ಸಾಲವನ್ನು ಸಹಾಯವಾಗಿ ಕೊಡಲು ಅಂತಹ ಗುರುತರವಾದ ಕಾರಣಗಳು ತಾವೇ ಏನಿದ್ದವು ಎಂದು ಸರಕಾರದವರಲ್ಲಿ ನಾನು ಇಲ್ಲಿ ಕೇಳುತ್ತೇನೆ. ಇದೇ ಹಣ ರೈತಾಪಿ ಜನಗಳಿಗಾಗಿ ಬಾವಿಗಳನ್ನು ತೋಡಿಸುವುದಕ್ಕೆ ಅಥವಾ ಅವರ ನೀರಾವರಿ ಕೆಲಸಗಳಿಗಾಗಿ ಉಪಯೋಗ ಮಾಡಿದ್ದರೆ ಚೆನ್ನಾಗಿರುತ್ತಿರಲ್ಲಿಲ್ಲವೇ ಅಥವಾ ಕನಿಷ್ಠ ಪಕ್ಷ ಎಷ್ಟು ತಾಲ್ಲೂಕುಗಳ ನೀರಾವರಿ ಕೆಲಸಗಳಿಗಾಗಿ ಎಂದು ಹಂಚಿಕೆ ಮಾಡಿದ್ದರೆ ಸರಿಯಾಗಿರುತ್ತಿರಲ್ಲಿಲ್ಲವೇ ? ಹೀಗೆ ಯಾವುದೋ ಒಂದು ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ಯಾರದೋ ಒಬ್ಬರ ಅನುಕೂಲವನ್ನು ಪಡೆದು ಕಾಂಗ್ರೆಸ್ಸಿನ ಫಂಡನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಇಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದೀರಾ ಎಂದು ಇಲ್ಲಿ ಕೇಳಬೇಕಾಗಿದೆ.

(ಶ್ರೀ ಬಿ. ಬೈರವ್ಯಾಡಿ)

ಶಾವು ಈರೀತಿ ಕಂಟ್ರಾಕ್ಟರುಗಳಿಗಾಗಿ ಹಣವನ್ನು ದುರುಪಯೋಗ ಮಾಡುವುದು ಬಹಳ ಅನ್ಯಾಯ, ದೇಶದ ಹಣವನ್ನು ಬೇರೆ ವ್ಯವಸಾಯಗಾರರಿಗೆ ಅನುಕೂಲವಾಗಿ ಬೇಕಾಗುವ ಕೆಲಸಗಳಿಗೆ ಉಪಯೋಗ ಮಾಡುವುದನ್ನು ಬಿಟ್ಟು ಹೀಗೆ ಅನುಚಿತವಾದ ಕೆಲಸಗಳಿಗೆ ಹಣ ಕೊಡುವುದನ್ನು ಕೈಬಿಡಬೇಕೆಂದು ಸರಕಾರಕ್ಕೆ ನಾನು ಇಲ್ಲಿ ಸೂಚನೆ ಕೊಡಬಯಸುತ್ತೇನೆ.

ಸ್ವಾಮಿ, ಹಳ್ಳಿಗಳಲ್ಲಿರುವ ರೈತಾಪಿ ಜನರು ತಮ್ಮ ದನಕರುಗಳನ್ನು ಸುಮಾರು ನೂರು ರೂಪಾಯಿ ಬೆಲೆ ಬಾಳುವಂತಹವುಗಳನ್ನು ಪೇಟೆಗೆ ತಂದು ಐದು ಹಾಗೂ ಹತ್ತು ರೂಪಾಯಿಗಳ ಬೆಲೆಯಲ್ಲಿ ಮಾರಾಟ ಮಾಡುತ್ತಿರುವ ನಿದರ್ಶನಗಳು ಈಗಲೂ ಇವೆ. ಅಲ್ಲದೆ ಇನ್ನೂ ಕೆಲವು ಕಡೆಗಳಲ್ಲಿ ದನಕರುಗಳಿಗೆ ಯಾವ ಬೆಲೆಯೂ ಬರಲಿಲ್ಲ ಎಂದು ಅವನ್ನು ಮನೆಬಿಟ್ಟು ಮೇವು ಸಿಗಲ್ಲಿಲ್ಲ ಎಂದು ಓಡಿಸಿರುವಂತಹ ನಿದರ್ಶನಗಳೂ ಸಾವಿರಾರು ನಮ್ಮ ಮುಂದೆ ಇವೆ. ಈ ಪರಿಸ್ಥಿತಿಯಲ್ಲಿ ದನಗಳ ಮೇವನ್ನು ಒದಗಿಸುವುದಕ್ಕಾಗಿ ಪ್ರತಿಯೊಂದು ಕುಟುಂಬಕ್ಕೂ ಮೇವನ್ನು ಕೊಂಡುಕೊಳ್ಳಲು, ದವಸ ಧಾನ್ಯಗಳನ್ನು ಕೊಳ್ಳಲು ಒಂದು ಸಂಸಾರಕ್ಕೆ ಸುಮಾರು 500 ರೂಪಾಯಿಗಳಂತೆ ಒದಗಿಸುವುದು ಸರಕಾರದ ಕರ್ತವ್ಯ. ಇದನ್ನು ಕಾರ್ಯಗತಮಾಡಲು ಸರಕಾರ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ತಂದಿದ್ದರೆ ಅದನ್ನು ನಾವು ಇಲ್ಲಿ ಸಂತೋಷದಿಂದ ಒಪ್ಪಬಹುದಾಗಿತ್ತು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಉದಾಹರಣೆಗಾಗಿ ಈಗ ಡಿವಿಜನಲ್ ಕಮಿಷನರಿಗೆ ತಕಾವಿ ಸಾಲಗಳನ್ನು ಕೊಡುವುದಕ್ಕಾಗಿ ಸರಕಾರ ಹಣವನ್ನು ಒದಗಿಸಿದೆ. ಅವರು ಒಂದು ಸಾವಿರದಿಂದ ಹದಿನೈದು ಸಾವಿರದ ವರೆಗೂ ಸಾಲ ಕೊಡಲು ಅವಕಾಶ ಮಾಡಿದ್ದಾರೆ. ಆದರೆ ಆ ಹಣ ಸಾಲದೆ ಕೇವಲ 50 ಹಾಗೂ ನೂರು ರೂಪಾಯಿಗಳಂತೆ ಕೊಡಲು ತೊಂದರೆಯಾಗಿದೆ. ಆದುದರಿಂದ ಕನಿಷ್ಠಪಕ್ಷ ಸರಿಯಾದ ಸಹಾಯವನ್ನಾದರೂ ಮಾಡಬೇಕು. ಏನೋ 80 ಜನರಿಗೆ ನೂರು, ಇನ್ನೂರು, ಮುನ್ನೂರು ಎಂದು ಕೊಟ್ಟರೆ ಅದರಿಂದ ಕಷ್ಟ ನಿವಾರಣೆಯಾದೀತೇ ಎಂದು ಈ ಸಂದರ್ಭದಲ್ಲಿ ಸರಕಾರವನ್ನು ಕೇಳುತ್ತೇನೆ. ಇದಕ್ಕೆ ಬದಲಾಗಿ ಪ್ರತಿ ಒಂದು ಸಂಸಾರಕ್ಕೂ 500 ರೂಪಾಯಿಗಳಂತೆ ಕೊಟ್ಟರೆ ಅವರುಗಳು ಸ್ವಲ್ಪ ಮಟ್ಟಿನ ದವಸ ಧಾನ್ಯಗಳನ್ನು ಕೊಂಡು ಕೊಳ್ಳಲು ಅನುಕೂಲವಾಗುತ್ತದೆ. ಆ ರೀತಿ ಸಹಾಯಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಸರಕಾರಕ್ಕೆ ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ.

ಬಾವಿಗಳನ್ನು ತೋಡುವುದಕ್ಕೆ ಸಾಲಕೊಡುವ ಕೆಲಸವನ್ನು ಜಮೀನು ಅಭಿವೃದ್ಧಿ ಬ್ಯಾಂಕುಗಳಿಗೆ ವಹಿಸಿದ್ದಾರೆ. ಆದರಲ್ಲಿ ಈ ವರ್ಷ 4,500 ಬಾವಿಗಳನ್ನು ಕೊಡಬೇಕೆಂದು ಬ್ಯಾಂಕಿಗೆ ಒಂದು ನಿರ್ದೇಶನವನ್ನು ಕೊಟ್ಟಿದ್ದಾರೆ. ಆ ಪ್ರಕಾರ ಒಂದು ತಾಲ್ಲೂಕಿಗೆ ಕೇವಲ 25 ಬಾವಿಗಳನ್ನು ಕೊಡುವುದಕ್ಕೆ ಬ್ಯಾಂಕಿಗೆ ಸಾಧ್ಯ

[MR. SPEAKER in the Chair].

ಬಾವಿಗಳನ್ನು ತೆಗೆಯುವುದಕ್ಕೋಸ್ಕರವಾಗಿ ನೂರಾರು, ಸಾವಿರಾರು ಅರ್ಜಿಗಳು ಬಂದಂಥ ಕಾಲದಲ್ಲಿ 25 ಬಾವಿಗಳನ್ನು ಮಾತ್ರ ಕೊಡುತ್ತೇವೆ ಎಂದು ಹೇಳುತ್ತಿರುವುದು ಬಹಳ ಆಶ್ಚರ್ಯವನ್ನುಂಟು ಮಾಡುತ್ತಿದೆ. ನೂರಕ್ಕೆ ಮೂರಂತೆ ಅಲ್ಲದಿದ್ದರೆ ಇನ್ನೂ ಮೂರು ಪರ್ಸೆಂಟ್ ಬಡ್ಡಿಯನ್ನು ಹಾಕಿ, ಆರು ಪರ್ಸೆಂಟ್‌ನಂತೆ ಯಾದರೂ ನೀರಾವರಿ ಬಾವಿಗಳಿಗೆ ಸಾಲವನ್ನು ಕೇಳುವವರಿಗೆಲ್ಲ ಹಣವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಿದ್ದರೆ ಬಹಳ ಚೆನ್ನಾಗಿತ್ತು. ರೈತರು ಈಗ ಕೆಲಸವಿಲ್ಲದೆ ಅಲೆಯುತ್ತ ಬೀದಿ ಬೀದಿ ತಿರುಗುತ್ತಿರುವ ಕಾಲದಲ್ಲಿ ತಮ್ಮ ಊರನ್ನು ಬಿಟ್ಟು ನೂರಾರು ಮೈಲಿ ವಲಸೆ ಹೋಗಿರುವ ಕಾಲದಲ್ಲಿ ಬಾವಿಗಳನ್ನು ತೆಗೆಸುವುದು ಅತಿ ಮುಖ್ಯ. ಇಂಥ ಕಾರ್ಯಕ್ರಮಗಳಲ್ಲಿ ಸರ್ಕಾರ ಸ್ವಲ್ಪ ಲುಕ್ಸಾನು ಮಾಡಿಕೊಂಡರೂ ಚಿಂತೆಯಿಲ್ಲ, ಬ್ಯಾಂಕ್ ಮೂಲಕವಾಗಿ ಆಗಲೀ, ನೇರವಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮೂಲಕವಾಗಿ ಆಗಲೀ, ನೀರಾವರಿ ಬಾವಿಗಳನ್ನು ತೆಗೆಸತಕ್ಕ ಶಕ್ತಿ ಇದ್ದು ಜಮೀನು ಇರುವವರೆಲ್ಲರಿಗೂ ಹಣವನ್ನು ಒದಗಿಸುವುದು ಬಹಳ ಮುಖ್ಯ. ಸರ್ಕಾರ ಈ ದಿಸೆಯಲ್ಲಿ ಯೋಚನೆಮಾಡಿ ಎಷ್ಟು ಹಣವನ್ನು ಒದಗಿಸುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನೂ ಪೂರ್ತಿಯಾಗಿ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಸೂಚನೆ ಕೊಡುತ್ತಿದ್ದೇನೆ.

ಪಂಪ್ ಸೆಟ್‌ಗಳನ್ನು ಒದಗಿಸುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಲು ಆರ್ಡರ್ ಮಾಡಿದೆ. ಕೆಲವುಕಡೆ ಪಂಪ್‌ಸೆಟ್‌ಗಳನ್ನು ಕೂಡ ಬದಗಿಸಿದ್ದಾರೆ. ಕೆಲವು ಪಂಪ್ ಸೆಟ್‌ಗಳು ಈಗ ಎರಡು ತಿಂಗಳ ಹಿಂದೆಯೇ ಬಂದಿದ್ದರೂ ಕೂಡ ಅದಕ್ಕೆ ಬೇಕಾದ ಆಕ್ಸೆಸರೀಸ್ ಸಂಬಂಧಪಟ್ಟ ಸಾಮಾನುಗಳನ್ನು ಸರ್ಕಾರ ಕೊಟ್ಟಿಲ್ಲ. ಹಾಲಿ ಇರುವ ಫಸಲನ್ನು ಉಳಿಸುವುದಕ್ಕೆ ಸರ್ಕಾರ ಸಹಾಯ ಮಾಡುವುದಾಗಿ ಹೇಳುತ್ತಿದೆ. ಆದರೆ ಈಗಾಗಲೇ ತಾಲ್ಲೂಕು ಆಫೀಸು ಮುಂಭಾಗದಲ್ಲಿ ಅಥವಾ ತಾಲ್ಲೂಕು ಬೋರ್ಡ್ ಆಫೀಸು ಮುಂದೆ ಬೇಕಾದಷ್ಟು ಯಂತ್ರಗಳು ಒಂದು ಬಿದ್ದಿವೆ. ಬಹಳ ದಿವಸಗಳಿಂದ ಈ ಯಂತ್ರಗಳು ಬಿದ್ದಿದ್ದರೂ ಅದಕ್ಕೆ ಬೇಕಾದ ಆಕ್ಸೆರಿಸೆಸ್ ಇಲ್ಲದೆ ಅವು ಕೆಲಸ ಮಾಡಲು ಸಾಧ್ಯವಿಲ್ಲವಾಗಿದೆ. ಕೋಟ್ಯಾಂತರ ರೂಪಾಯಿಗಳನ್ನು

ಇಂಜಿನ್‌ಗಳ ಮೇಲೆ ಹಾಕಿ ಅದನ್ನು ತಂದು ಬೀದಿಯಲ್ಲಿ ಬಿಸಾಡುವಂಥ ಹವ್ಯಾಸವನ್ನು ಸರ್ಕಾರ ಮಾತುಬಾರದಾಗಿತ್ತು. ಈಗ ಇರತಕ್ಕ ಬೆಳೆಯನ್ನು ಉಳಿಸಬೇಕು ಎನ್ನುವ ಸೋಗಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ತಂದಾಗ್ಯೂ ಅದರಿಂದ ರೈತರಿಗೆ ಉಪಯೋಗವಾಗಲ್ಲಿಲ್ಲ. ಸರ್ಕಾರಕ್ಕೆ ಕೂಡ ಹಣ ಖರ್ಚಾಗಿಯಲ್ಲಿ ಇದ್ದಂತೆ ಆಗಲಿಲ್ಲ. ಸರ್ಕಾರ ಮಾಡುವ ಕೆಲಸಕಾರ್ಯಗಳ ವ್ಯವಸ್ಥೆ - ಹೀಗಾವತೆ ಅವುಂದ ಯಾವ ಪ್ರತಿಫಲವೂ ರೈತನಿಗೆ ಲಭಿಸಿದಂತಾಗುವುದಿಲ್ಲ. ಈ ರೀತಿಯ ಅವ್ಯವಸ್ಥೆಯಿಂದ ಕಾರುಬಾರು ನಡೆಸುವುದಿಂದ ಯಾವ ವಿಧವಾದ ಸೌಲಭ್ಯಗಳೂ ದೊರಕಲಿಲ್ಲ ಎಂದು ಬವಳ ವಿಷಾದದಿಂದ ಹೇಳುತ್ತಿದ್ದೇನೆ.

ಪಂಪ್‌ಸೆಟ್‌ಗಳನ್ನು ಒದಗಿಸುವ ವ್ಯವಸ್ಥೆಯನ್ನು ಸರ್ಕಾರ ಸ್ವಲ್ಪ ಸಡಿಲಗೊಳಿಸಿದ್ದಾರೆ. ಇದುವರೆಗೂ ಜಿಲ್ಲಾ ಅಸಿಸ್ಟೆಂಟ್ ಡೈರೆಕ್ಟರ್ ಮೂಲಕವಾಗಲಿ, ಎಲೆಕ್ಟ್ರಿಕಲ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೂಲಕವಾಗಲೀ ಪಡೆಯಬೇಕಾಗಿದ್ದ ಪದ್ಧತಿಯನ್ನು ಬದಲಾಯಿಸಿ ಇಂಜಿನ್‌ಗಳನ್ನು ತಾಲ್ಲೂಕು ತಹಸೀಲ್ದಾರ್ ಅಥವಾ ಎಲೆಕ್ಟ್ರಿಕಲ್ ಅಸಿಸ್ಟೆಂಟ್ ಇಂಜಿನಿಯರ್ ಮೂಲಕ ತೆಗೆದುಕೊಳ್ಳುವಂತೆ ಮಾಡಿದ್ದಾರೆ. ಸರ್ಕಾರ ಹೆಚ್ಚಿನ ಕಾರ್ಯ ವ್ಯವಸ್ಥೆಯನ್ನು ಮಾಡಿ ಪಂಪ್‌ಸೆಟ್‌ಗಳನ್ನು ಒದಗಿಸುವ ಹಾಗೆ ವಿಚಾರಿಸು ಮಾಡಬೇಕು. ಕೇವಲ ಸರ್ಕಾರ ಮಾಡಿರುವ ಆಜ್ಞೆಯ ಮೇಲೆ ತಹಸೀಲ್ದಾರರು ಪಂಪ್‌ಸೆಟ್‌ಗಳನ್ನು ಕೊಡಬೇಕಾಗಿದೆ. ಸರ್ಕಾರ ಕಾಗದದ ಮೇಲೆ ಆಜ್ಞೆ ಮಾಡುವಂತೆಯೇ ಅವಕ್ಕೆ ಬೇಕಾದ ಹಣವನ್ನು ಕೂಡ ಒದಗಿಸುವುದಕ್ಕೆ ವಿಚಾರಿಸು ಮಾಡಬೇಕು. ಈಗಾಗಲೇ ಒಂದೊಂದು ತಾಲ್ಲೂಕಿನಲ್ಲಿ ಸಾವಿರಾರು ಅರ್ಜಿಗಳನ್ನು ಪಂಪ್‌ಸೆಟ್‌ಗಳಿಗಾಗಿ ಸಲ್ಲಿಸಿದ್ದಾರೆ. ಅವರ ಕೇಳಿಕೆಗಳು ಕೇಳಿಕೆಗಳಿಗಾಗಿಯೇ ಉಳಿಯಬಾರದು. ಅವರಿಗೆ ತಕ್ಷಣ ಪಂಪ್‌ಸೆಟ್‌ಗಳನ್ನು ಒದಗಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಮೀನುಗಾರಿಕೆ ಇಲಾಖೆಯಲ್ಲಿ ಕೇವಲ ಬಂದರುಗಳಿರುವ ಕಡೆ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇನ್‌ಲ್ಯಾಂಡ್ ಫಿಷರೀಸ್‌ಗೆ ಸಹ ಹೆಚ್ಚಿನ ಅವಕಾಶಗಳನ್ನಾಗಲಿ ಸವಲತ್ತುಗಳನ್ನಾಗಲಿ ಕಲ್ಪಿಸಿಕೊಡುತ್ತಿಲ್ಲಾ. ಈ ತರಹ ತಾರತಮ್ಯವನ್ನು ಬಿಟ್ಟು ಎಲ್ಲ ಕಡೆಯೂ ಕೂಡ ಮೀನಿನ ಅಭಿವೃದ್ಧಿಗೋಸ್ಕರ ಹಣವನ್ನು ಖರ್ಚುಮಾಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಈಗ ನಮ್ಮ ಮುಂದೆ ತಂದಿರುವ ಮೂರು ಕೋಟಿ ಚಿಲ್ಲರೆ ರೂಪಾಯಿಗಳ ಬೇಡಿಕೆ ಏನಿದೆ ಇದು ನ್ಯಾಯವಾದ ಬೇಡಿಕೆಯಲ್ಲ, ಇದು ಸ್ವಾಗತಾರ್ಹವಾದುದಲ್ಲ ಎಂದು ಹೇಳಿ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

MR. SPEAKER.—The Leader of the Opposition wanted to know what exactly is going to be the Business, how we are arranging the sittings. In some paper it has appeared that we are siting on Monday and that we are re-assembling on the 23rd. I am surprised and I think it is a shrewd guess. How can anybody anticipate such things before we adjourn? That should not happen. The Papers should be more vigilant and careful.

The House is aware that in the Business Advisory Committee it was discussed that we will sit till to-day, and finish by that time the Supplementary Demands, the excess demands and one or two other Bills also. But we have not been able to catch up. Anyway the understanding that the House will stand adjourned has been finally agreed to and we are adjourning to-day to reassemble on the 23rd so that the members may accommodate themselves. There is one small Bill, the Mysore Ayurvedic and Unani Practitioners' Registration and Medical Practitioners' Miscellaneous Provisions (Amendment) Bill, 1966, which is supposed to take only 10 or 15 minutes. I suppose we can finish that because it is causing inconvenience to certain people.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಸಭೆಯ ಮುಂದೆ ಇಟ್ಟಿರುವ ಸಪ್ಲಿಮೆಂಟರಿ ಅಂದಾಜುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ದಿನ ಮುಖ್ಯವಾಗಿ ದೇಶದಲ್ಲಿ ಮಳೆಯ ಅಭಾವದಿಂದುಂಟಾಗಿರುವ ಕ್ಷಾಮಪರಿಸ್ಥಿತಿ ಬಗ್ಗೆ ಸರಕಾರ ತೀವ್ರ ಕಾರ್ಯಕ್ರಮ ಕೈಕೊಂಡು ನಿರುದ್ಯೋಗಿಗಳಾಗಿರುವ ಹಳ್ಳಿಗಾಡಿನವರಿಗೆ ಉದ್ಯೋಗ ಕಲ್ಪಿಸುವುದಕ್ಕೆ ಮತ್ತು ಆಹಾರವನ್ನು ಎಲ್ಲರಿಗೂ ಒದಗಿಸುವುದಕ್ಕೆ ಹಣ ಕೇಳಲು ಸಭೆಯ ಮುಂದೆ ಅಂದಾಜನ್ನಿಟ್ಟಿದ್ದಾರೆ ಎಂದು ನಾನು ತಿಳಿದಿದ್ದೆ. ಆದರೆ ಆ ಅಂದಾಜುಗಳನ್ನು ನೋಡಿದಮೇಲೆ ರಾಜ್ಯದ ಎಲ್ಲೋ ಕೆಲವು ಭಾಗಗಳಲ್ಲಿ ಸೇತುವೆಗಳನ್ನು ಕಟ್ಟುವುದಕ್ಕೆ, ಕೆಲವು ಪಂಪುಸೆಟ್ಟು

ಶ್ರೀ (ಪಿ. ವೆ ಕಟಗಿರಿಯಪ್ಪ)

ಗಳಿಗೆ ಮತ್ತು ಇತರ ಕೆಲವು ವಿಷಯಗಳಿಗೆ ಹಣ ಕೇಳಿದ್ದಾರೆಂಬುದು ಗೊತ್ತಾಯಿತು. ಕೆಲವು ನೌಕರರನ್ನೂ ಹೆಚ್ಚಿಸಲು ಕ್ರಮ ತೆಗೆದುಕೊಂಡಿದ್ದಾರೆ. ಜಿಲ್ಲೆಗಳಿಗೆ ಮಂತ್ರಿಗಳು ಹೋಗಿ ಕ್ಷಾಮ ಪರಿಸ್ಥಿತಿ ನೋಡಿ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಳ್ಳುವುದಾಗಿಯೂ ಜನರು ಹೆದರಬೇಕಾಗಿಲ್ಲವೆಂದೂ ಸರಕಾರವು ಆಶ್ವಾಸನೆ ಕೊಟ್ಟಿದ್ದರು. ಆದರೆ ಆದರ ಬಗ್ಗೆ ಈ ಅಂದಾಜುಗಳಲ್ಲಿ ಹಣ ಒದಗಿಸದಿರುವುದು ವಿಷಾದಕರ. ಇದನ್ನು ನೋಡಿದರ ಸರಕಾರವವರು ತಮಗೆ ಬೇಕಾದ್ದಕ್ಕೆ ಕೋಟಿಗಟ್ಟಲೆ ಹಣ ಖರ್ಚುಮಾಡುತ್ತಾರೆ, ಯಾವುದು ಮುಖ್ಯವೋ ಅದಕ್ಕೆ ಗಮನ ಕೊಡುವುದಿಲ್ಲ ಎಂಬುದು ಕಂಡುಬರುತ್ತದೆ. ಈ ದಿವಸ ನಮ್ಮ ಕೋಲಾರ ಜಿಲ್ಲೆಯ ಪರಿಸ್ಥಿತಿ ಹೇಳುವುದಾದರೆ, ಅಲ್ಲಿ ಮಳೆಯ ಅಭಾವದಿಂದ ಶೇಕಡ 60-70 ಜನರಿಗೆ ಒಂದು ಹೊತ್ತು ಊಟಕ್ಕೆ ಕೂಡ ಮಾರ್ಗವಿಲ್ಲ. ಅವರಿಗೆ ಉದ್ಯೋಗ ಕಲ್ಪಿಸುವುದಕ್ಕೆ ಕ್ಷಾಮ ಪರಿಹಾರ ಕಾರ್ಯಕ್ರಮ ಕೈಕೊಂಡು ಆಗಾಗ್ಗೆ ಬರುವ ಬರಗಾಲದಿಂದ ಅವರನ್ನು ಪಾರುಮಾಡಬೇಕೆಂದು ಸರಕಾರಕ್ಕೆ ತಿಳಿಸಿದ್ದೆವು. ಮುಖ್ಯವಾಗಿ ನಮ್ಮ ಜಿಲ್ಲೆಗೆ ಹೆಚ್ಚು ಬಾವಿಗಳಿಗೆ ಹಣ ಒದಗಿಸಬೇಕೆಂದು ಅನೇಕ ಸಂದರ್ಭದಲ್ಲಿ ಒತ್ತಾಯ ಮಾಡಿದ್ದೆವು. ಜಿಲ್ಲೆಯ ಪ್ರವಾಸಕ್ಕೆ ಬಂದಿದ್ದ ಮಂತ್ರಿಗಳಿಗೂ ತಿಳಿಸಿದ್ದೆವು. ಆದರೆ ಇದುವರೆಗೆ ಬಾವಿಗಳಿಗೆ ಹಣವನ್ನೇನೂ ಕೊಟ್ಟಿಲ್ಲ. ಸರಕಾರದವರು ನಾಲ್ಕು ಸಾವಿರ ಬಾವಿಗಳಿಗೆ ಸಹಾಯಮಾಡಿ ಒಂದೊಂದು ತಾಲ್ಲೂಕಿಗೆ 20-30 ಬಾವಿಗಳನ್ನು ಮಂಜೂರುಮಾಡಿದ್ದಾರೆ. ಸರಕಾರ ಮಂಜೂರಾತಿ ನೀಡುವ ವಿಚಾರ ವಿಚಿತ್ರವಾಗಿದೆ, ಮಲೆನಾಡು ಪ್ರದೇಶ, ಕನ್ನಂಬಾಡಿ ಪ್ರದೇಶ, ಹೆಚ್ಚು ಮಳೆಯಾಗುವ ಪ್ರದೇಶ ಮುಂತಾದ ಕಡೆಗಳಿಗೆ ಹೆಚ್ಚು ಬಾವಿಗಳಿಗೆ ಸಹಾಯ ಮಾಡಿದ್ದಾರೆ, ಅದೇ ಕೋಲಾರ ಜಿಲ್ಲೆಯಲ್ಲಿ ದೊಡ್ಡ ಜಲಾಶಯಗಳಿಲ್ಲ, ಅವನ್ನು ಕಟ್ಟಲು ಅಲ್ಲಿ ಅವಕಾಶವಿಲ್ಲ, ಹಾಗಿರುವಾಗ ಅಲ್ಲಿಗೆ ಜಾಸ್ತಿ ಕೊಡದೆ ಎಲ್ಲಾ ತಾಲ್ಲೂಕುಗಳಿಗೂ ಒಂದೇ ಸಮನಾಗಿ ಕೊಡುವುದು ಸುಯಲ್ಲ.

ನಮ್ಮ ಮಿತ್ರರು ಹೇಳಿದಹಾಗೆ ಗೋಣಿಚೀಲಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟು ಕೊಂಡಿದ್ದಾರೆ, ಅದರ ಅವಶ್ಯಕತೆ ಕಾಣುವುದಿಲ್ಲ. ಬತ್ತ ಈಗ ವಸೂಲು ಮಾಡುತ್ತಿದ್ದಾರೆ, ಗೋಣಿ ಚೀಲ ಸಿಕ್ಕದಿರುವ ಪದಾರ್ಥವೇನೂ ಅಲ್ಲ. ಅದನ್ನು ಮುಂಚಿತವಾಗಿ ಕೊಳ್ಳುವುದು ನ್ಯಾಯವಲ್ಲ. ಇದನ್ನು ನೋಡಿದರೆ ಯಾರಿಗೋ ಏನೋ ಅನುಕೂಲ ಮಾಡಿಕೊಡುವುದಕ್ಕಾಗಿ ಮುಂಚೆ ಹಣ ಖರ್ಚು ಮಾಡಿದ್ದಾರೆಂದು ತೋರುತ್ತದೆ. ಅಲ್ಲವೆ ದೇಶ ಕಷ್ಟದಲ್ಲಿರುವಾಗ ಹೊಸಹೊಸ ಆಫೀಸರುಗಳನ್ನು ನೇಮಕ ಮಾಡುವುದು, ಟೂರಿಸ್ಟ್ ಆಫೀಸರು, ರೆವೆನ್ಯೂ ಇಲಾಖೆಗೆ ಹೊಸ ಡೆಪ್ಯುಟಿ ತಹಸೀಲ್ದಾರರು ಮುಂತಾದವರನ್ನು ನೇಮಕ ಮಾಡುವುದು ಯೋಗ್ಯವಲ್ಲ. ಇದನ್ನು ನೋಡಿದರೆ ದೇಶದ ಕ್ಷಾಮ ಪರಿಸ್ಥಿತಿಯ ಅರಿವು ಸ್ವಲ್ಪವೂ ಇಲ್ಲ ಎಂದು ಭಾಸವಾಗುತ್ತದೆ. ಕೆಲವು ಬಾಬುಗಳಿಗೆ ಈಗ ಕೇಳಿರುವ ಹಣ ಸಾಧುವಾಗಿಲ್ಲ. ಆದುದರಿಂದ ನಮ್ಮ ಮುಂದಿಟ್ಟಿರುವ ಡಿಮ್ಯಾಂಡುಗಳನ್ನು ನಾನು ಪೂರ್ಣವಾಗಿ ವಿರೋಧಿಸುತ್ತೇನೆ.

11-00 A M.

†ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈಗ ನನ್ನ ಮಾನ್ಯ ಸ್ನೇಹಿತರಾದಂಥ ಶ್ರೀ ವೆಂಕಟಗಿರಿಯಪ್ಪನವರು ಹೇಳಿದಂತೆ ಬಹುಭಾಗ ಕೋಲಾರ, ತುಮಕೂರು, ರಾಯಲಸೀಮೆ ಬಾರ್ಡರ್ ನಲ್ಲಿ ಇರತಕ್ಕ ತಾಲ್ಲೂಕುಗಳಲ್ಲಿ ಭೀಕರವಾದ ಕ್ಷಾಮ ಪರಿಸ್ಥಿತಿ ಬಂದಿದೆ. ಹಿಂದಿನಸಾರಿ ಇದೇ ಪರಿಸ್ಥಿತಿ ದೇಶದಲ್ಲಿ ತಲೆದೋರಿದಾಗ ಈ ವಿಚಾರವನ್ನು ಚರ್ಚೆ ಮಾಡುವುದಕ್ಕೋಸ್ಕರ ಈ ಶಾಸನ ಸಭೆ ಹೋದ ಅಧಿವೇಶನದಲ್ಲಿ 3 ದಿವಸಗಳ ಕಾಲಾವಧಿಯಲ್ಲಿ ಪ್ರತಿಯೊಬ್ಬ ಸದಸ್ಯರೂ ಅವರವರ ಕ್ಷೇತ್ರದ ಬಗ್ಗೆ ತಿಳಿಸಿದರು. ಮಂತ್ರಿಗಳೇ ಖುದ್ದಾಗಿ ಕೆಲವು ಕಡೆಗಳಲ್ಲಿ ಪರಿಶೀಲಿಸಿದರು. ಮಂತ್ರಿಗಳಲ್ಲಿ ಮೊದಲನೆಯವರು ಶ್ರೀಮಾನ್ ರಾಮರಾವ್ ಅವರು. ಆಮೇಲೆ ನೀರಾವರಿ ಮಂತ್ರಿಗಳು, ಮತ್ತು ಹಣಕಾಸಿನ ಸಚಿವರು—ಹೀಗೆ ಒಬ್ಬರಮೇಲೊಬ್ಬರು ಬಂದು ಪರಿಶೀಲನೆ ಮಾಡಿದರು. ಪರಿಶೀಲನೆ ಮಾಡಿದನಂತರ ಎಲ್ಲೆಲ್ಲಿ ಏನೇನು ಕಾರ್ಯಗತ ಮಾಡಬೇಕೆಂಬ ಬಗ್ಗೆ ತಾಲ್ಲೂಕು ಬೋರ್ಡ್ ಸದಸ್ಯರುಗಳನ್ನೂ ಹಾಗು ಜಿಲ್ಲಾಧಿಕಾರಿಗಳನ್ನು ಕರೆಸಿ ಕೂಲಂಕಷವಾಗಿ ಪರಿಶೀಲನೆ ಮಾಡಿದರು. ಆರೀತಿ ಬಂದಮೇಲೆ ಕಾರ್ಯಗತವಾದುದೇನು ಅಂದರೆ ಅದಿನ್ನೂ ಪರಿಶೀಲನೆಯಲ್ಲಿಯೇ ಉಳಿದಿದೆಯೇ ಹೊರತು ಕಾರ್ಯಗತವಾಗಲೇ ಇಲ್ಲ. ಸರ್ಕಾರ ಮಾಡಿರತಕ್ಕ ಯೋಜನೆಗಳಲ್ಲಿ ಸ್ವಲ್ಪ ಉತ್ತಮವಾದ ಕೆಲಸವೆಂದರೆ ಬಾವಿಗಳನ್ನು ತೆಗೆಸಲಿಕ್ಕೆ ಹಣವನ್ನು ಸಾಲದ ರೂಪವಾಗಿ ರೈತರಿಗೆ ಕೊಟ್ಟಿರುವುದು ಆಗಿದೆ. ಆದರೆ ಸರ್ಕಾರ ಸಾಲಕೊಟ್ಟ ಹಣಕ್ಕೆ ಅನೇಕ ಬಾಬುಗಳಲ್ಲಿ ಬಡ್ಡಿ ಸಹ ವಾಪಸ್ಸು ಬರುತ್ತಾ ಇಲ್ಲ. ಈ ಹಣವನ್ನು ತಾಲ್ಲೂಕ್ ಬೋರ್ಡ್ ಮತ್ತು ಎನ್.ಇ.ಎಸ್. ಬ್ಲಾಕ್‌ಗಳ ಮೂಲಕ ಸಾಲದ ರೂಪವಾಗಿ ಹಿಂದಿನಿಂದ ಕೊಡಿಸುತ್ತಿದ್ದರು. ಈಗ ಅದನ್ನು ಬದಲಾವಣೆಮಾಡಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ವಹಿಸಿದ್ದಾರೆ. ಆಮೇಲೆ ಒಂದಿನಿಂದ ಇವರು ಕೊಟ್ಟಿರತಕ್ಕ ಸಾಲಪನ್ನು ಪಡೆಯುವುದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆಂದು ನಾನು ಕೇಳುತ್ತೇನೆ. ಆ ಹಣವನ್ನು ಸಾಲ ಪಡೆದವರು ಯಾವರೀತಿ ಸರ್ಕಾರಕ್ಕೆ ಪಾವತಿ ಮಾಡಬೇಕೆಂಬ ಬಗ್ಗೆ

ನಿಬಂಧನೆಗಳನ್ನು ಸರಿಯಾದ ರೀತಿಯಲ್ಲಿ ಮಾಡಲಿಲ್ಲ. ಹತ್ತಾರುಸಾರಿ ಕ್ಯಾಬಿನೆಟ್‌ನಲ್ಲಿ ಕುಳಿತು ಇವರು ತೀರ್ಮಾನ ಮಾಡಿದ್ದೇನು ? ಮೊದಲಿದ್ದ ಕಟ್ಟುಪಾಡುಗಳನ್ನು ಸಡಿಲ ಮಾಡುವುದೇ ಆಗಿದೆಯೆಂದು ನನಗೆ ತೋರುತ್ತದೆ. ರೈತ ಬಾವಿಗೋಸ್ಕರ ಅರ್ಜಿ ಹಾಕಿದರೆ ಕೇವಲ 18 ತಿಂಗಳಲ್ಲಿ ಅವನಿಗೆ ಹಣ ಮಂಜೂರಾಗ ಬೇಕೆಂದು ಇವರೇ ಹೇಳಿದ್ದಾರೆ, ಇವತ್ತಿನ ದಿವಸ ಸುಮಾರು 1, 2, 3 ವರ್ಷಗಳಾದರೂ ಹಣ ಮಂಜೂರಾಗುತ್ತಿಲ್ಲ. ಸಾಮಾನ್ಯವಾಗಿ ಒಬ್ಬ ರೈತ ಒಂದು ಬಾವಿಗೋಸ್ಕರ ಅರ್ಜಿಹಾಕಿ ಅದಕ್ಕೆ ಸಂಬಂಧಪಟ್ಟ ರಿಕಾರ್ಡುಗಳನ್ನು ಬಿಲ್ಡ್ ಅಪ್ ಮಾಡಬೇಕಾದರೆ ಅವನಿಗೆ ಸುಮಾರು 100-150 ರೂಪಾಯಿ ಗಳವರೆಗೂ ಹಣ ಖರ್ಚಾಗುತ್ತದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಒಂದೊಂದು ಸಾರಿ 25 ಬಾವಿ ಗಳಿಗೆ ಹಣ ಮಂಜೂರು ಮಾಡುತ್ತಾರೆಂದು ಹೇಳಿದ್ದಾರೆ. ಆದರೆ ಇವತ್ತೇನೋ ಬಾವಿಗಳನ್ನು ನಿರ್ಮಾಣ ಮಾಡಲು ಹಣಕೊಡುತ್ತಾರೆ. ಆದರೆ ಸಾಕಷ್ಟು ಹಣದ ಅಭಾವದಿಂದ ಎಷ್ಟೋ ಬಾವಿಗಳು ಕುಸಿದು ಬೀಳುತ್ತವೆ ಮತ್ತು ಒಡೆದು ಹೋಗತಕ್ಕ ಪರಿಸ್ಥಿತಿ ಉಂಟಾಗುತ್ತದೆ. ಏತಕ್ಕೆಂದರೆ ಬಾವಿಗಳನ್ನು ಸರಿಯಾಗಿ ಕಟ್ಟಿರುವುದಿಲ್ಲ ಇದಕ್ಕಾಗಿ ರೈತರು ಅವರ ದನಕರುಗಳನ್ನು ಹರಾಜುಮಾಡಿ ಹಣವನ್ನು ಕೊಟ್ಟಿದ್ದರೂ ಅನೇಕ ಸಂದರ್ಭಗಳಲ್ಲಿ ಬಾವಿಗಳ ಕೆಲಸ ಸಮರ್ಪಕವಾಗಿ ಆಗುವುದಿಲ್ಲ ಈಗ ಈ ಬಗ್ಗೆ ಇರತಕ್ಕ ನಿಯಮಗಳನ್ನು ಸಡಿಲಗೊಳಿಸಿ ರುವುದಕ್ಕೂ ಹಿಂದಿದ್ದ ವ್ಯವಸ್ಥೆಗೂ ಎಷ್ಟೋ ವ್ಯತ್ಯಾಸವಿದೆ. ಒಬ್ಬ ರೈತ ಸಾಮಾನ್ಯವಾಗಿ ಒಂದು ಬಾವಿಗೆ ಅರ್ಜಿ ಕೊಡಬೇಕಾದರೆ, ಮೊದಲು ಗ್ರಾಮಾಧಿಕಾರಿಗಳಲ್ಲಿ ತೆಗೆದುಕೊಂಡು ಹೋಗಿ ಅಲ್ಲಿ ರಿಕಾರ್ಡ್ ಮಾಡಿಸಿ ನಂತರ ತಾಲ್ಲೂಕ್‌ಬೋರ್ಡ್, ಸಬ್-ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ ರಿಜಿಸ್ಟರ್ ಮಾಡಿಸಿ ಸರ್ಟಿಫಿಕೇಟು ಪಡೆದು ಬಿ. ಡಿ. ಒ.ಗೆ ಪರಿಶೀಲನೆಗೆ ಕಳುಹಿಸಿದನಂತರ ಸಬ್-ಡಿವಿಜನ್ ಆಫೀಸರ್ ಹಣವನ್ನು ಬಾವಿಗಾಗಿ ಮಂಜೂರು ಮಾಡುತ್ತಾ ಇದ್ದರು. ಈಗ ಆದು ಬದಲಾವಣೆಯಾಗಿ ರಿಕಾರ್ಡನ್ನು ತೆಗೆದುಕೊಂಡು ಪಾರ್ಟಿಯೇ ಅಧಿಕಾರಿಗಳ ಹತ್ತಿರ ಬರಬೇಕು. ಸೊಸೈಟಿ ಇನ್‌ಸ್ಪೆಕ್ಟರ್, ಬಿ. ಡಿ. ಒ. ಹಾಗೂ ಡೆಪ್ಯೂಟಿ ಕಮಿಷನರ ಹತ್ತಿರ ಆದು ಮಂಜೂರಾಗಬೇಕು. ಇಷ್ಟೆಲ್ಲಾ ಆಗುವ ಹೊತ್ತಿಗೆ ರೈತನಿಗೆ ಸಾಮಾನ್ಯವಾಗಿ 250-300 ರೂಪಾಯಿಗಳ ವರೆಗೆ ಖರ್ಚಾಗುತ್ತದೆ. ಈಗ ಆ ರೀತಿ ಅರ್ಜಿಗಳನ್ನು ತೆಗೆದುಕೊಳ್ಳುವುದರಲ್ಲಿಯೂ ಕೂಡ ಒಂದು ನಿರ್ದಿಷ್ಟ ಕಾಲವನ್ನು ನಿಗದಿಮಾಡಿದ್ದಾರೆ. ಆ ನಿರ್ದಿಷ್ಟ ಕಾಲದನಂತರ ಮತ್ತೆ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ರೈತರ ಪ್ರತಿನಿಧಿಗಳಾಗಿ ನಾವು ಇಲ್ಲಿ ಬಂದು ಎಷ್ಟು ಹೇಳಿದರೂ ನಮ್ಮ ಸಲಹೆಗಳಿಗೆ ಅಷ್ಟಾಗಿ ಗಮನ ಕೊಡುತ್ತಾ ಇಲ್ಲ. ಆದ್ದರಿಂದ ಇನ್ನು ಮುಂದೆ ಬಾವಿಗಳಿಗೆ ಅರ್ಜಿಗಳೂ ಬಂದರೆ ಅವನ್ನು ಪೈಯಾರಿಟಿ ಮೇಲೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಂತಹ ಉತ್ತಮ ವ್ಯವಸ್ಥೆ ಇಲ್ಲಿ ಇಲ್ಲದಿರುವುದು ಶೋಚನೀಯ

ಇನ್ನು ಪಂಪು ಸೆಟ್ಟುಗಳನ್ನು ಕೊಡುವ ವ್ಯವಸ್ಥೆ ಬಗ್ಗೆ ಕೆಲವು ಅಂಶಗಳನ್ನು ಇಲ್ಲಿ ನಾನು ಹೇಳಬೇಕಾಗಿದೆ. ಸ್ಟ್ಯಾಂಡಿಂಗ್ ಕ್ರಾಪ್ಸ್‌ಗೆ ಕೊಡಿಸುತ್ತೇವೆಂದು ಹೇಳುತ್ತಾರೆ. ನನ್ನ ತಾಲ್ಲೂಕು ಆಫೀಸಿನ ಮುಂದೆ ಸುಮಾರು 20 ದಿವಸಗಳ ಹಿಂದೆ ಕೇವಲ 5 ಪಂಪು ಸೆಟ್ಟುಗಳು ಬಂದುವು. ಅವನ್ನು ಬೇರೆ ಕಡೆಗೆ ಸಾಗಿಸಬೇಕಾದುದಕ್ಕೆ ಸುಮಾರು 15 ಎತ್ತುಗಳು ಬೇಕಾಯಿತು. ಅದಕ್ಕೆ ಬೇಕಾದಂಥ ಸಾಮಾನುಗಳು ಇನ್ನೂ ಬಂದಿಲ್ಲ. ಪೈಪ್ಗೆ ಯನ್ನೂ ಕೂಡ ಇನ್ನೂ ಒಡೆಯಲಿಲ್ಲ. ಅದಕ್ಕೆ ಡ್ರೈವರ್ ಯಾರು, ಅದನ್ನು ಯಾವ ರೀತಿ ತೆಗೆದುಹಾಕ ಬೇಕೆಂಬ ವ್ಯವಸ್ಥೆಯೇ ಇಲ್ಲ. ಹೀಗಿರುವಾಗ ಸ್ಟ್ಯಾಂಡಿಂಗ್ ಕ್ರಾಪ್ಸ್‌ನ್ನು ಉಳಿಸುತ್ತೇವೆಂದು ಹೇಳಿದರು. ಇವರು ಅದನ್ನು ಎಲ್ಲಿ ಉಳಿಸಿದ್ದಾರೆ ? ನನ್ನ ತಾಲ್ಲೂಕಿನಲ್ಲಿ ಆ ರೀತಿ ಏನೂ ಉಳಿಸಿಲ್ಲವೆಂದು ನಾನು ಇಲ್ಲಿ ಹೇಳುತ್ತೇನೆ. ತಿಪಟೂರು ತಾಲ್ಲೂಕು ಮೈಸೂರು ಸಂಸ್ಥಾನಕ್ಕೇ ಸೇರಿದೆ ಎಂಬುದನ್ನು ಇವರು ಚೆನ್ನಾಗಿ ತಿಳಿಯ ಬೇಕು. ಇನ್ನು ಎಲೆಕ್ಟ್ರಿಕ್ ಪಂಪು ಸೆಟ್ಟು ಮತ್ತು ಆಯಿಲ್ ಇಂಜಿನ್ನುಗಳನ್ನು ಕೊಡುವುದರಲ್ಲಿ ಸುಮಾರು 300-400 ರೂಪಾಯಿಗಳವರೆಗೂ ವ್ಯತ್ಯಾಸವಿದೆ. ನಾವೇ ಕೊಳ್ಳುವುದಕ್ಕೂ ಸರ್ಕಾರ ಕೊಡುವುದಕ್ಕೂ ಬಹಳ ಅಂತರವಿರುತ್ತದೆ. ಇವರು ಸಾಮಾನ್ಯವಾಗಿ ಒಂದು ಟ್ರಾಕ್ಟರನ್ನು ಕೊಡಿಸಬೇಕಾದರೆ ರೈತನಾದವನು ಎನ್‌ಕಂಬ್ರೆನ್ಸ್ ತೆಗೆದುಕೊಂಡನಂತರ ಸಾಲ ಕೊಡಿಸುವ ರೀತಿಯಲ್ಲಿ ಎಲೆಕ್ಟ್ರಿಕ್ ಪಂಪ್ ಸೆಟ್ ಮತ್ತು ಆಯಿಲ್ ಇಂಜಿನ್ನುಗಳನ್ನು ಕೊಳ್ಳುವ ವ್ಯವಸ್ಥೆ ಮಾಡಬೇಕು. ಆಗ ಆದರಿಂದ ರೈತನಿಗೆ ಒಳ್ಳೆಯದಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಪಂಪು ಸೆಟ್ಟುಗಳ ವಿಷಯವನ್ನು ಮಾನ್ಯ ಸದಸ್ಯರು ಹೇಳುವಾಗ ಒಂದು ಮಾತನ್ನು ಅವರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ವಿಕಕಾಲದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ನೇರವಾಗಿ ಪಂಪು ಸೆಟ್ಟುಗಳು ಬೇಕು ಎಂದು ಕೇಳಿದರೆ ಹೇಗೆ ? ಈಗ ಸಾವಿರಾರು ಪಂಪು ಸೆಟ್ಟುಗಳನ್ನು ಕೊಳ್ಳುವ ಅವಶ್ಯಕತೆ ಬಂದಿದೆ. ಆದರೆ ಕೆಲವು ಕಡೆಗಳಲ್ಲಿ ಮಾಮೂಲಾಗಿ ಹೆಚ್ಚಿಗೆ ಕೇಳುವ ಪದ್ಧತಿ ಸ್ವಾಭಾವಿಕ ವಾಗಿ ಬಂದಿದೆ. ಒಂದು ವೇಳೆ ತಾಲ್ಲೂಕ್ ಬೋರ್ಡಿನವರು ಈ ಜವಾಬ್ದಾರಿಯನ್ನು ತೆಗೆದುಕೊಂಡು ಅವರೇ ಪಂಪು ಸೆಟ್ಟುಗಳನ್ನು ಕೊಳ್ಳುತ್ತೇವೆಂದು ಹೇಳಿದರೆ ಅವರೇ ಜವಾಬ್ದಾರಿಯನ್ನು ಆ ಬಗ್ಗೆ ವಹಿಸಿದರೆ ನಮ್ಮ ಅಭ್ಯಂತರವೇನೂ ಇಲ್ಲ. ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್ ಅವರು ಅದಕ್ಕೆ ಹಣವನ್ನು ಒದಗಿಸಿಕೊಡುತ್ತಾರೆ. ನೇರವಾಗಿ ಸರ್ಕಾರದವರೇ ಪಂಪು ಸೆಟ್ಟುಗಳನ್ನು ಕೊಂಡು ಅವನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ. ಈಗಿನ ಸಂದರ್ಭದಲ್ಲಿ ಎಲ್ಲರೂ ಕಿರ್ಲೋಸ್ಕರ್ ಕಂಪೆನಿ ಪಂಪು ಸೆಟ್ಟುಗಳೇ ಬೇಕು ಎಂದು ಹೇಳಿದರೆ ಅವು ದೊರೆಯುವುದಿಲ್ಲಾ, ಆದಕ್ಕಾಗಿ, ಯಾವ ಬೇರೆ ಕಂಪೆನಿಯ ಪಂಪ್‌ಸೆಟ್ಟುಗಳನ್ನಾಗಲಿ ತಾಲ್ಲೂಕು ಬೋರ್ಡಿನವರು

(ಶ್ರೀ ಡಿ. ದೇವರಾಜ್ ಅರಸ್)

ಜವಾಬ್ದಾರಿಯನ್ನು ವಹಿಸಿಕೊಂಡು ಕೊಳ್ಳುತ್ತೇವೆಂದು ಹೇಳಿದರೆ ಅಂತಹವರಿಗೆ ರೈತರ ಉಪಯೋಗಕ್ಕಾಗಿ ಪಂಪು ಸೆಟ್ಟುಗಳನ್ನು ಕೊಳ್ಳಲು, ಸರ್ಕಾರದವರು ನೇರವಾಗಿ ಕೊಡಲು ತಕ್ಕ ವ್ಯವಸ್ಥೆಯನ್ನು ಈಗಾಗಲೇ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡ ತೀರ್ಮಾನವನ್ನು ನಾನು ಕೇಳಿದ್ದೇನೆ. ಅದನ್ನು ಒಪ್ಪುತ್ತೇನೆ ತಾಲ್ಲೂಕ್ ಬೋರ್ಡಿನಿಂದ ಹಣವನ್ನು ಅನೇಕರಿಗೆ ಒದಗಿಸಿಲ್ಲ, ತಹಸೀಲ್‌ದಾರರ ಮೂಲಕ ಕಾಗದ ಪತ್ರಗಳೂ ಹೋಗಿದ್ದರೂ ಹಣ ಒದಗಿಸಿಲ್ಲ. ಇಂತಹ ಸನ್ನಿವೇಶಗಳು ಬೇಕಾದಷ್ಟಿವೆ. ಸುಮ್ಮನೆ ತಹಸೀಲ್ದಾರರು ಅದಕ್ಕಾಗಿ ಹಣ ಕೊಡುತ್ತಾರೆ ಎಂಬುದಾಗಿ ಇವರು ಮೊದಲಿನಿಂದಲೂ ಹೇಳುತ್ತಾ ಇದ್ದಾರೆ. ಆದ್ದರಿಂದ ಪಂಪುಸೆಟ್ಟುಗಳನ್ನು ರೈತರಿಗೆ ಯಾರು ಕೊಡುವವರು ಎಂಬ ಬಗ್ಗೆ ಇವರಲ್ಲಿ ಒಂದು ನಿಗದಿ ಇಲ್ಲ. ಒಟ್ಟಿಗೆ ಪಂಪು ಸೆಟ್ಟುಗಳನ್ನು ಕೊಂಡಿಗೆ ಸ್ವಲ್ಪ ಕಡಮೆ ಬೆಲೆಗೆ ದೊರೆಯುತ್ತವೆ. ಆ ರೀತಿ ಮಾಡದೆ ಒಬ್ಬೊಬ್ಬರೇ ಕೊಂಡುಕೊಳ್ಳುವುದಕ್ಕೆ ಹೋದರೆ ಖಂಡಿತವಾಗಿ ಅದರ ಬೆಲೆ ಜಾಸ್ತಿಯಾಗುತ್ತದೆ. ಸಾಲಕೊಟ್ಟು ಪಂಪುಸೆಟ್ಟು ಕೊಳ್ಳಿ ಎಂದು ರೈತರಿಗೆ ಹೇಳಿ. ಆಸ್ತಿ-ಆಧಾರ ಮಾಡಿಕೊಂಡು ಬೇಕಾದರೆ ರೈತನಿಗೆ ಕೊಡಿ. ಶೇ॥ 3, 4 ಅಥವಾ 5 ರಂತೆ ಬಡ್ಡಿ ಹಾಕಿ ಕೊಡಿ. ಆದರೆ ಪಂಪು ಸೆಟ್ಟಿಗಾಗಿ ಸರ್ಕಾರ ಹಣವನ್ನು ಸಾಲಕೊಡುವಾಗ ಕಂತುಗಳ ರೂಪದಲ್ಲಿ ಕೊಡುವುದು ಬೇಡ. ಸಾಲದ ರೂಪದಲ್ಲಿ ಒಂದೇ ಸಾರಿ ಹಣವನ್ನು ಕೊಡಿ.

ಶ್ರೀ ಡಿ. ದೇವರಾಜ್ ಅರಸ್.—ನಾವೇನೋ ಅದಕ್ಕಾಗಿ ಹಣವನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಆದರೆ ಅವರಿಗೆ ಅನೇಕ ಸಂದರ್ಭಗಳಲ್ಲಿ ಆ ಸಾಲ ಸಿಗುವುದಿಲ್ಲ. ಎರಡನೆಯದಾಗಿ ಸಂದರ್ಭಾನುಸಾರವಾಗಿ ಆ ಸಾಲವನ್ನು ಅವರು ತೆಗೆದುಕೊಂಡು ಹೋಗಿ ಪಂಪು ಸೆಟ್ಟುಗಳನ್ನು ತೆಗೆದುಕೊಂಡರೇ, ಮದುವೆ ಮಾಡಿದರೇ ಅಥವಾ ಇನ್ನಾವುದಾದರೂ ಸಾಲವನ್ನು ತೀರಿಸಿದರೆ ಏನೂ ಗೊತ್ತಾಗುವುದಿಲ್ಲ. ಅದಕ್ಕಾಗಿ ಅಂಥಾದ್ದನ್ನೆಲ್ಲಾ ತಪ್ಪಿಸುವುದಕ್ಕಾಗಿ ಈಗ ಅಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬಡ್ಡಿಯನ್ನು ಬೇಕಾದರೆ ಅವರಿಂದ ಡಬ್ಬಲ್ಲಾಗಿ ವಸೂಲು ಮಾಡಿ ಅದಕ್ಕೆ ನಮ್ಮ ವಿರೋಧವಿಲ್ಲ. ಯಾರು ಪಂಪು ಸೆಟ್ಟಿಗೆಂದು ಹಣವನ್ನು ಸಾಲ ಪಡೆಯುತ್ತಾರೋ ಅಂತಹವರು ಅದಕ್ಕೆ ಆ ಹಣವನ್ನು ವಿನಿಯೋಗಿಸದೆ ಹೋದರೆ ಅಂತಹವರಿಂದ ಬಡ್ಡಿಯನ್ನು ಜಾಸ್ತಿಯಾಗಿ ವಸೂಲು ಮಾಡಬಹುದು.

ಇನ್ನು ದೇಶದ ಹಿತದೃಷ್ಟಿಯಿಂದ ಹಾಗೂ ಬಡಜನರ ಏಳಿಗೆಯ ದೃಷ್ಟಿಯಿಂದಲಾದರೂ ರಾಜ್ಯ ಪಾಲರ ಬಂಗಲೆಯ ರಿಪೇರಿಗಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದನ್ನು ಇವರು ಕೂಡಲೇ ನಿಲ್ಲಿಸಬೇಕೆಂದು ನಾನು ಹೇಳುತ್ತೇನೆ. ರೈತನಿಗೆ ವ್ಯವಸಾಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಅದನ್ನು ಮಾಡದೆ ಸಣ್ಣ ಸಣ್ಣ ಮಂತ್ರಿಗಳ ಮೇಲೆ ಇನ್ನೊಬ್ಬರು ಮಂತ್ರಿ—ಹೀಗೆ ವ್ಯವಸ್ಥೆ ಮಾಡುವುದನ್ನು ತಪ್ಪಿಸಬೇಕು. ಇಲ್ಲದಿದ್ದರೆ ಅವರೆಲ್ಲರೂ ವಿಧಾನ ಸೌಧದಲ್ಲಿ ಸುಮ್ಮನೆ ಕುಳಿತಿರಬೇಕಾಗುತ್ತದೆ. ಒಟ್ಟಿನಲ್ಲಿ ರೈತರಿಗೆ ಕೊಡತಕ್ಕ ತಕಾವಿ ಸಾಲ ನೇರವಾಗಿ ಅವರಿಗೆ ಮುಟ್ಟುವ ವ್ಯವಸ್ಥೆ ಮಾಡಬೇಕು. ಸಾಮಾನ್ಯವಾಗಿ ಒಬ್ಬ ಬಡ ರೈತನಿಗೆ ರಿಕಾರ್ಡ್ಸ್ ಬಿಲ್ಡಪ್ ಮಾಡಬೇಕಾದರೆ ಸುಮಾರು 36 ರೂಪಾಯಿಗಳವರೆಗೂ ಖರ್ಚಾಗುತ್ತದೆ. ಅಂದ ಮೇಲೆ ಇವರು ಕೇವಲ 50 ರೂಪಾಯಿಗಳನ್ನು ಕಂತಿನ ಪ್ರಕಾರ ತೆಗೆದುಕೊಂಡು ಆ ಬಡ ರೈತ ಏನು ಮಾಡಬೇಕು ? ಆದ್ದರಿಂದ ಆ ವ್ಯವಸ್ಥೆಯನ್ನು ಇನ್ನು ಮುಂದೆ ಮಾಡಬಾರದು. ಈಗಲಾದರೂ ನಮ್ಮ ದೇಶದಲ್ಲಿ ಹೆಚ್ಚಿಗೆ ಆಹಾರವನ್ನು ಬೆಳೆಸುವಂತೆ ಮಾಡಲು ಈ ಸರ್ಕಾರದವರಿಗೆ ಧರ್ಮ ಬುದ್ಧಿಯನ್ನು ಭಗವಂತನು ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಸ್ವಾಮೀ, ಈಗ ಸರ್ಕಾರದವರು ಮಂಡಿಸಿರುವ ಸಪ್ಲಿಮೆಂಟರಿ ಡಿಮಾಂಡಿನ ಮೇಲೆ ಈ ಸಭೆಯಲ್ಲಿ ನನ್ನ ಸ್ನೇಹಿತರನೇಕರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಇಷ್ಟು ಮಾತ್ರ ತಮ್ಮ ಮುಂದಿಡಬಯಸುತ್ತೇನೆ. ಈಗ ವರ್ಷ ವರ್ಷ ಖರ್ಚು ಮಾಡುತ್ತಿರುವ ಹಣ ನ್ಯಾಯವಾದ ರೀತಿಯಲ್ಲಿ, ವಿವಿಧ ಜಿಲ್ಲೆಯಲ್ಲಿ ಖರ್ಚಾಗುತ್ತಿಲ್ಲ. ಮತ್ತು ನೀರಾವರಿ ವಿಚಾರದಲ್ಲಿ ಸ್ವಲ್ಪ ಇಲ್ಲಿ ಹೇಳುತ್ತೇನೆ. ನಮ್ಮ ತಾಲ್ಲೂಕು ಮಟ್ಟಿಗೆ ಹೇಳುವುದಾದರೆ, ಪಿ. ಡಬ್ಲ್ಯು. ಡಿ. ಮಂತ್ರಿಗಳು ಎಲ್ಲಾ ಇಲಾಖಾ ಅಧಿಕಾರಿಗಳನ್ನು ಕರೆಸಿ ಆರ್ಡರ್ ಮಾಡಿದರೂ, ಈ ತಾಲ್ಲೂಕು ಬಹಳ ಹಿಂದೆ ಬಿದ್ದಿದೆ, ಇದಕ್ಕೆ ಸ್ವಲ್ಪ ತೀವ್ರವಾಗಿ ಕೆಲಸಮಾಡಬೇಕೆಂದು ವರ್ಕ್ಸ್ ಲಿಸ್ಟ್ ಮಾಡಿ ಹೆಚ್ಚು ಕಡಿಮೆ ಹನ್ನೊಂದು ತಿಂಗಳಾಯಿತು. ಆದರೆ ಇದುವರೆಗೂ ಮೂರು ಕಾಸೂ ಖರ್ಚು ಮಾಡಿಲ್ಲ. ಆದರೆ ಅಧಿಕಾರಿಗಳು ಮಾತ್ರ ದಿನಾ ನೋಡಿದರೂ ಟೂರಿನಲ್ಲಿರುತ್ತಾರೆ. ಇವತ್ತು ನಾಗಮಂಗಲ, ಇವತ್ತು ಹೊಸಕೋಟೆ, ಕನಕಪುರ ಎಂದು ಹೇಳಿ, ಹದಿನೈದು ಮೈಲಿಗೆ ಟೂರ್ ಮಾಡಿ, ಅಲ್ಲಿ ತಂಗುವುದು; ಇದಕ್ಕೆ ಮಾತ್ರ ದುಡ್ಡು ಖರ್ಚಾಗುತ್ತಾ ಇದೆ. ಅದಕ್ಕೋಸ್ಕರ ಸರ್ಕಾರ ಸಪ್ಲಿಮೆಂಟರಿ ಡಿಮಾಂಡ್ ತಂದು ಖರ್ಚು ಮಾಡುತ್ತಾ ಇದೆ. ಇಂದು ದೇಶದಲ್ಲಿ ಕಷ್ಟ ಪರಿಸ್ಥಿತಿ ಬಂದಿರುವಾಗ, ಆಹಾರ ಇಲ್ಲದೆ ಜನ ಸಾಯುತ್ತಿರುವಾಗ, ನ್ಯಾಯವಾಗಿ ಬೇಕಾಗಿದ್ದಂತಹ ಕಾರ್ಯಗಳಿಗೆ ಹಣ

ವಿನಯೋಗಿಸಬೇಕೆಂದು ಅಧಿಕಾರಿಗಳಿಗೆ ಸರ್ಕಾರದವರು ಹೇಳಬೇಕು ಎಂದು ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತು ಈ ಸಪ್ಲಿಮೆಂಟರಿ ಡಿಮಾಂಡ್ ತಂದ 15 ದಿವಸದೊಳಗೆ ಬಜೆಟ್ ಅಧಿವೇಶನ ಸೇರತಕ್ಕದ್ದಿದೆ. ಅದಕ್ಕೆ ಮೊದಲು ಈ ಸಭೆಯಲ್ಲಿ ಈ ವರ್ಷದ ಕೊನೆಯಲ್ಲಿ ಗೋಣಿ - ಚೀಲಕ್ಕೋಸ್ಕರ 50 ಲಕ್ಷ ಕೊಡಬೇಕೆಂದು ತಂದಿರುವುದು ಆಶ್ಚರ್ಯಕರ ಎಂದು ನಾನು ಈ ಸಭೆಯಲ್ಲಿ ಹೇಳುತ್ತೇನೆ. ರೈತನಿಗೆ ಸಲ್ಲಬೇಕಾದ ದುಡ್ಡು ನ್ಯಾಯವಾಗಿ ಸಲ್ಲಬೇಕು. ಅದಷ್ಟು ಶೀಘ್ರವಾಗಿ ಸರ್ಕಾರದವರು ಜನಗಳಿಗೆ ಅನುಕೂಲ ಮಾಡಿ ದೇಶದಲ್ಲಿ ಒಳ್ಳೆಯ ಕೀರ್ತಿಯನ್ನು ಪಡೆಯಲಿ ಎಂದು ಹೇಳಿ, ಅಧ್ಯಕ್ಷರನ್ನು ವಂದಿಸಿ, ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಸಪ್ಲಿಮೆಂಟರಿ ಡಿಮಾಂಡಿನ ದರ್ಜೆಯಲ್ಲಿ ಭಾಗ ವಹಿಸಿದ್ದ ಸದಸ್ಯರ ಟೀಕೆಗಳನ್ನು ನಾನು ಕೇಳಿದ್ದೇನೆ. ಅದರಲ್ಲಿರತಕ್ಕಂತಹ ಮುಖ್ಯವಾದ ಅಂಶಗಳಿಗೆ ಮಾತ್ರ ನಾನು ಉತ್ತರವನ್ನು ಕೊಡಲು ಬಯಸುತ್ತೇನೆ. ಸಪ್ಲಿಮೆಂಟರಿ ಡಿಮಾಂಡುಗಳನ್ನು ಪುನಃ ಪುನಃ ಸರ್ಕಾರದವರು ಈ ಶಾಸನ ಸಭೆಯ ಮುಂದೆ ತರುತ್ತಾರೆ ಎಂದು ಹೇಳತಕ್ಕಂತಹ ಒಂದು ಟೀಕೆ ಇದೆ. ಅನಿರೀಕ್ಷಿತವಾದ ಮತ್ತು ಎಮರ್ಜೆನ್ಸಿ ದೃಷ್ಟಿಯಿಂದ ಇನ್ನೂ ಖರ್ಚು ಮಾಡತಕ್ಕ ಪ್ರಸಂಗ ಬರುತ್ತದೆ. ಮತ್ತು ಯಾವುದಕ್ಕೂ ನಾವು ಮೊದಲೇ ನಿರೀಕ್ಷಣೆಯಿಂದ ಸಾಕಷ್ಟು ಹಣ ಒದಗಿಸುವುದು ಸಾಧ್ಯವಿಲ್ಲ. ಅಂತಹ ವಿಚಾರವಾಗಿ ಮಾತ್ರ ನಾವು ಕಂಟಿಂಜೆನ್ಸಿ ಹಣದಿಂದ ತೆಗೆದು ಉಪಯೋಗಿಸುತ್ತಿದ್ದೇವೆ ; ಮತ್ತು ಅದನ್ನು ಶಾಸನ ಸಭೆಯ ಮುಂದೆ ತಂದು ಒಪ್ಪಿಗೆ ಪಡೆಯುತ್ತೇವೆ. ಈ ರೀತಿ ಅನಿರೀಕ್ಷಿತವಾದ ಸಂಧರ್ಭಗಳು ಎಷ್ಟೋ ಬರುತ್ತವೆ. ಅದನ್ನು ನಿರ್ಧಾರವಾಗಿ ಹೇಳುವುದಂತೂ ಸಾಧ್ಯವಿಲ್ಲ. ಅದು ಒಂದು ಸಲ ಬರುತ್ತದೆ ಎರಡು ಸಲ ಬರುತ್ತದೆ ಅಥವಾ ಹತ್ತು ಸಲ ಬರಬಹುದು. ಈ ವರ್ಷ ನಮ್ಮ ನೈಸರ್ಗಿಕ ಪರಿಸ್ಥಿತಿ ಚೆನ್ನಾಗಿರದ ಕಾರಣ ಮತ್ತು ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಅನಾವೃಷ್ಟಿಯಿಂದ ರೈತರಿಗೆ ಅತ್ಯಂತ ತೊಂದರೆ ಉಂಟಾದ ಕಾರಣ ಇದರಲ್ಲಿ ತೋರಿಸಿದಂತಹ ಕೆಲವು ಖರ್ಚುಗಳನ್ನು ಸರ್ಕಾರ ಮಾಡತಕ್ಕಂತಹ ಪ್ರಸಂಗ ಬಂತು. ಈಗ ಮಾನ್ಯ ಸದಸ್ಯರುಗಳು 4—5 ಡಿಮಾಂಡಿನ ವಿಚಾರದಲ್ಲಿ ಬಹಳ ಟೀಕೆ ಮಾಡಿದ್ದಾರೆ. ಮೊದಲನೆಯದಾಗಿ ರಾಜ್ಯಪಾಲರ ಸಿಬ್ಬಂದಿಗೆ ಸಂಬಂಧಪಟ್ಟ ಡಿಮಾಂಡುಗಳ ವಿಚಾರದಲ್ಲಿ ಅವರು ಹೇಳಿದ್ದಾರೆ, ಈ ಖರ್ಚು ಸಾಧುವಾದುದೇನೂ ಅಲ್ಲ, ಈ ಖರ್ಚು ಆಗಬಾರದಿತ್ತು ಎಂದು ಹೇಳಿದ್ದಾರೆ. ರಾಜ್ಯಪಾಲರ ವಿಚಾರದಲ್ಲಿ ನಮ್ಮ ಶಾಸನ ಸಭೆ ಯಾವುದೇ ರೀತಿಯ ಟೀಕೆ ಮಾಡದಿರುವುದಂತೂ ಒಳ್ಳೆಯದು. ಏಕೆಂದರೆ, ಕಾನ್ಸ್ಟಿಟ್ಯೂಶನ್ ಮುಖಾಂತರ ಅದನ್ನು ಒಪ್ಪಿಕೊಂಡಿದ್ದಾರೆ. ರಾಜ್ಯಪಾಲರು ಒಬ್ಬ ವ್ಯಕ್ತಿಯಲ್ಲ. ಒಂದು ಸಂಸ್ಥೆ ಆದ್ದರಿಂದ ಸಂಸ್ಥೆ ಇರುವಾಗ ಅದಕ್ಕೆ ಸಂಬಂಧಪಟ್ಟ ಮತ್ತು ಸಂಪ್ರದಾಯವಾದ, ಸರಿಯಾದ, ಯಾವುದೇ ಖರ್ಚು ಮಾಡತಕ್ಕ ಪ್ರಸಂಗ ಬಂದರೆ ಸರ್ಕಾರ ಖರ್ಚು ಮಾಡುತ್ತದೆ. ಅದನ್ನು ಗಮನಿಸದೆ ಒಬ್ಬ ಮಾನ್ಯ ಸದಸ್ಯರು ಹೇಳಿದ ಹಾಗೆ, ಟೀಕೆ ಮಾಡುವಾಗಲೂ ಕೂಡಾ ನಾವು ಸ್ವಲ್ಪ ಇತಿ ಮಿತಿಯನ್ನು ತಿಳಿದು ಟೀಕೆ ಮಾಡುವುದು ಬಹಳ ಒಳ್ಳೆಯದು ಎಂದು ಕಾಣುತ್ತದೆ. ಸರ್ಕಾರದವರು ವಿಪರೀತವಾಗಿ ಖರ್ಚುಮಾಡುತ್ತಾರೆ ಎಂದು ಟೀಕೆ ಮಾಡತಕ್ಕ ಉತ್ಸಾಹದಲ್ಲಿ ಒಬ್ಬ ಮಾನ್ಯ ಸದಸ್ಯರು ಹೇಳಿದರು, ಅವರು ಈಗ ಇಲ್ಲಿ ಇಲ್ಲ. ಇಪರೆ ಚೆನ್ನಾಗಿತ್ತು. ಗೌರ್ನರನ್ನು ತೆಗೆದು ಬಿಡಿ, ಒಂದೂವರೆ ಕೋಟಿ ಉಳಿತಾಯ ಮಾಡಬಹುದು, ಮಂತ್ರಿಗಳಲ್ಲಿ 8—10 ಮಂತ್ರಿಗಳನ್ನು ತೆಗೆದು ಹಾಕಿಬಿಡಿ, ಆದರಿಂದ 3 ಕೋಟಿ ಉಳಿಯುತ್ತದೆ, ಡಿವಿಜನಲ್ ಕಮಿಶನರುಗಳನ್ನು ತೆಗೆದುಹಾಕಿ, ಅದರಿಂದ 5 ಕೋಟಿ ಉಳಿಯುತ್ತದೆ; ಎಂದು. ಈ ಲೆಕ್ಕ ಅವರು ಎಲ್ಲಿಂದ ಸಂಗ್ರಹಿಸಿದರೋ ನನಗೆ ಗೊತ್ತಿಲ್ಲ. ಇಂತಹ ಟೀಕೆಗಳನ್ನು ಮಾಡುವಾಗ ಸ್ವಲ್ಪ ಮಟ್ಟಿಗೆ ಮಿತಿ ಇರಬೇಕು. ನಾವು ಒಂದು ಕಾನ್ಸ್ಟಿಟ್ಯೂಶನ್ ಚೌಕಟ್ಟಿನಲ್ಲಿ ಕೆಲಸಮಾಡುವಾಗ ಇಂತಹ ಬೇಜವಾಬ್ದಾರಿಯುತವಾದ ಟೀಕೆ ಮಾಡುವುದು ಕಾನ್ಸ್ಟಿಟ್ಯೂಶನಿಗೆ ಸರಿಯಲ್ಲವೆಂದು ನನ್ನ ಭಾವನೆ. ಖರ್ಚನ್ನು ಕಡಮೆ ಮಾಡಲು ಸರ್ಕಾರ ಸರ್ವ ಪ್ರಯತ್ನ ಮಾಡುತ್ತದೆ. ಯಾವ ಯಾವ ಭಾಗಗಳಲ್ಲಿ ಯಾವುದೇ ಕೆಲಸಗಳಿಗೆ ಧಕ್ಕೆ ಬಾರದಂತೆ ದಕ್ಷತೆಯಿಂದ ಕೆಲಸಮಾಡುವಂತೆ ಬೇರೆ ಬೇರೆ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆದಕ್ಕೆ ಧಕ್ಕೆ ಬಾರದಂತೆ ಎಷ್ಟುಮಟ್ಟಿಗೆ ಸಾಧ್ಯವೋ, ಅಷ್ಟು ಮಟ್ಟಿಗೆ ಖರ್ಚನ್ನು ಕಡಿಮೆ ಮಾಡಲು ಸರ್ಕಾರ ಹಣಗಾಡುತ್ತಾ ಇದೆ. ಇದಕ್ಕೆ ನಾನು ಕೂಡಾ ಅವರು ಹೇಳಿದ ದಾಟಿಯಲ್ಲಿ ಹೇಳುವುದಾದರೆ, ನಮ್ಮ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಪದ್ಧತಿಯಿಂದ ಬೇಕಾದಷ್ಟು ಖರ್ಚಾಗುತ್ತಾ ಇದೆ. ಕೇಂದ್ರದಲ್ಲಿ ಪಾರ್ಲಿಮೆಂಟ್ ಇದೆ. 16—17 ರಾಜ್ಯಗಳ ಶಾಸನ ಮಂಡಲಗಳಿವೆ. ಇವೆಲ್ಲಾ ಬಹಳ ಖರ್ಚಿನ ಬಾಬುಗಳು. ಇದನ್ನು ನಾವು ತೆಗೆದುಹಾಕಬಹುದು. ಇದರಿಂದ ಉಳಿತಾಯಮಾಡಬಹುದು. ಈ ತರಹದ ಟೀಕೆಗಳು ಯೋಗ್ಯವಾದುದಲ್ಲ. ಇದರ ಬದಲು, ಯಾವ ಯಾವ ಬಾಬಿನಲ್ಲಿ ಖರ್ಚು ಕಡಿಮೆ ಮಾಡಬೇಕು, ಎಂದು ಸರಿಯಾಗಿ ನಮಗೆ ಒಂದು ವಿಧಾಯಕವಾದ ಸೂಚನೆಯನ್ನು ಮಾಡಿದರೆ ನಾವು ಅವುಗಳನ್ನು ಕೃತಜ್ಞತೆಯಿಂದ ಸ್ವೀಕಾರ ಮಾಡುತ್ತೇವೆ. ಇವರಿಗೆ ಬುದ್ಧಿ ಇಲ್ಲ, ಈ ಕಡೆ ಕುಳಿತವರಿಗೇನೇ ಬುದ್ಧಿ ಇದೆ ಎಂದು ನಾನು ಹೇಳುವುದಿಲ್ಲ. ಬೇರೆ ಬೇರೆ ಜನರಿಗೆ ಬೇರೆ ಬೇರೆ ವಿಚಾರ ಹೊಳೆಯಬಹುದು. ಆ ವಿಚಾರ ವ್ಯವಹಾರಿಕವಾಗಿ ಇದ್ದರೆ ಅದನ್ನು ಸ್ವೀಕರಿಸುವುದಕ್ಕೆ ಸರ್ಕಾರ ಯಾವಾಗಲೂ ಸಿದ್ಧವಿದೆ ಎನ್ನುವುದನ್ನು ನಾನು ಹೇಳಲು ಬಯಸುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಪ್ರತಿ ವರ್ಷ ನಾವು ನಮ್ಮ ಖರ್ಚಿನ ಬಾಬಿನಲ್ಲಿ ಒಟ್ಟು 11 ಕೋಟಿ ರೂಪಾಯಿಗಳಷ್ಟು ಖೋತವನ್ನು ನಾವು ಮಾಡಿದ್ದೇವೆ. 11 ಕೋಟಿ ರೂಪಾಯಿಗಳಲ್ಲಿ 8 ಕೋಟಿ ರೂಪಾಯಿ

(ಶ್ರೀ ರಾಮಕೃಷ್ಣ ಡೆಗಡೆ)

ಗ್ಯಾಪ್ ನಮ್ಮ ಬಜೆಟ್‌ನೊಳಗೆ ಏನು ಇದೆ ಅದೂ ಕೂಡಾ ಇದರಲ್ಲಿ ಸೇರಿಕೊಂಡಿದೆ. ಸುಮಾರು ಒಂದು ಕೋಟಿಯಿಂದ ಒಂದು ಕೋಟಿ 50 ಲಕ್ಷ ರೂಪಾಯಿಗಳವರೆಗೆ ಬೇರೆ ಬೇರೆ ಇಲಾಖೆಗಳಲ್ಲಿ ಅಡ್ಮಿನಿಸ್ಟ್ರೇಟಿವ್ ಖರ್ಚು ಕಡಮೆ ಮಾಡಿ ನಾವು ಉಳಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ, ಮತ್ತು ಅದನ್ನು ಸರ್ಕಾರ ದವರು ಪ್ರಯತ್ನ ಮಾಡುತ್ತಾ ಇದ್ದಾರೆ. ಪ್ರತಿಯೊಂದು ಇಲಾಖೆಯಲ್ಲೂ ಕನಿಷ್ಟ ಪಕ್ಷ ನೂರಕ್ಕೆ ಹತ್ತರಷ್ಟು ಖರ್ಚನ್ನು ಕಡಿಮೆಮಾಡಬೇಕೆಂದು ನಾವು ಕಡ್ಡಾಯವಾಗಿ ನಿರ್ಧರಿಸಿದ್ದೇವೆ. ಅದರಿಂದ ಹೊಸದಾಗಿ ಯಾವ ಇಲಾಖೆಯಲ್ಲೂ ನೇಮಕ ಮಾಡಕೂಡದು ಎಂದು ಮತ್ತು ಇರತಕ್ಕಂತಹ ಸಿಬ್ಬಂದಿಯಲ್ಲೇ ಹೆಚ್ಚಿನ ಕೆಲಸವನ್ನು ಮಾಡಲು ಪ್ರಯತ್ನಿಸಬೇಕೆಂಬುದನ್ನೂ ಕೂಡಾ ನಾವು ತೀರ್ಮಾನ ಮಾಡಿದ್ದೇವೆ. ಆದರೆ ಸರ್ಕಾರದ ಕೆಲಸ ದಿನದಿನಕ್ಕೂ ಹೆಚ್ಚು ಹೆಚ್ಚು ವ್ಯಾಪಕವಾಗಿ ಬೆಳೆಯುತ್ತಾ ಹೋಗುವಾಗ ಮತ್ತು ನಮ್ಮ ಪಂಚವಾರ್ಷಿಕ ಯೋಜನೆಗಳೂ ಕಳಗೆ ಇರತಕ್ಕಂತಹ ಕಾರ್ಯಕ್ರಮಗಳು ಭರದಿಂದ ನಡೆಯುವ ಅಗತ್ಯವಿರುವಾಗ ನಾವು ಒಮ್ಮೆಲೇ ಈ ಒಂದು ಮಿತವ್ಯಯ ಮಾಡುವುದರಿಂದ ಹೆಚ್ಚು ದುಡ್ಡು ಉಳಿಸುವುದಕ್ಕಾಗುವುದಿಲ್ಲ. ಅದು ನಮ್ಮ ಸರ್ಕಾರದ ಖರ್ಚಿನ ಮೇಲೆ ಹೋಗುತ್ತದೆ. ಅದನ್ನು ಯಶಸ್ವಿಯಾಗಿ ನಿರವೇರಿಸುವುದಕ್ಕೆ ನೋಡಬೇಕು. ಅದು ಹೆಚ್ಚಿಗೆ ಸಾಧ್ಯವಾಗಲಿಕ್ಕಿಲ್ಲ.

ಆದರೂ ನಮ್ಮ ಮಾನ್ಯ ಸದಸ್ಯರಿಗೆ ಒಂದು ಆಶ್ವಾಸನೆ ಕೊಡಲಿಕ್ಕೆ ಬಯಸುತ್ತೇನೆ. ಹಿಂದೆ ಎಷ್ಟು ಪ್ರಯತ್ನ ಮಾಡಿದೆವೋ ಅದಕ್ಕಿಂತ ಹೆಚ್ಚು ಪ್ರಯತ್ನವನ್ನು ಬರುವ ವರ್ಷ ಮಾಡಲಿಕ್ಕೆ ನಿರ್ಧಾರ ಮಾಡಿದ್ದೇವೆ. ದುರಾದೃಷ್ಟದಿಂದ ಕಳೆದ ಕೆಲವು ವರ್ಷಗಳ ಅವಧಿಯಲ್ಲಿ, ನಮ್ಮ ರಾಜ್ಯದ ಹಣಕಾಸಿನ ವ್ಯವಹಾರದಲ್ಲಿ ಎಷ್ಟರ ಮಟ್ಟಿಗೆ ಡಿಸಿಪ್ಲಿನ್ ಇರಬೇಕೋ ಎಷ್ಟರಮಟ್ಟಿಗೆ ಶಿಸ್ತು ಸಂಯಮ ಇರಬೇಕೋ ಅಷ್ಟರಮಟ್ಟಿಗೆ ಅನೇಕ ಕಾರಣಗಳಿಂದ ಶಿಸ್ತು ಮತ್ತು ಸಂಯಮ ನಡೆದು ಬಂದಿಲ್ಲ. ನಾನು ಯಾವುದೇ ಒಬ್ಬ ವ್ಯಕ್ತಿಗೆ ಅಥವಾ ಕೆಲವೆಂದು ವ್ಯಕ್ತಿಗಳಿಗೆ ಆ ದೋಷವನ್ನು ಆರೋಪಿಸುವುದಿಲ್ಲ. ಇಷ್ಟು ಮಾತ್ರ ನಿಜ. ಅನೇಕ ಕಾರಣಗಳಿಂದ, ಅನೇಕ ಒತ್ತಾಯ ಮತ್ತು ಒತ್ತಡ ಆರ್ಥಿಕ ಶಾಖೆಯ ಮೇಲೆ ಬಂದಿದ್ದರಿಂದ, ಸ್ವಲ್ಪಮಟ್ಟಿಗೆ ಶಿಥಿಲತೆ ಅವರ ವ್ಯವಹಾರದಲ್ಲಿ ಬಂದಿದೆ. ಆ ಶಿಥಿಲತೆಯನ್ನು ಕೊನೆ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ ಮತ್ತು ಸಿದ್ಧ ಎಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಹೊಸದಾಗಿ ನೇಮಿಸಿಕೊಂಡ ಆರ್ಥಿಕ ಸಲಹೆಗಾರರ ಬಗ್ಗೆ ಕಟುವಾದಂಥ ಟೀಕೆ ಬಂತು. ನಾನು ಇಷ್ಟು ಮಾತ್ರ ಹೇಳಲಿಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಆರ್ಥಿಕ ವಿಚಾರಗಳಲ್ಲಿ ಮತ್ತು ಪ್ಲಾನಿಂಗ್ ಸಂಬಂಧಪಟ್ಟಂಥ ವಿಚಾರಗಳಲ್ಲಿ ನಮಗಿಂತ ಪ್ರತ್ಯೇಕವಾಗಿ ವಿಚಾರಗಳನ್ನು ನಿಷ್ಪಕ್ಷವಾದ ದೃಷ್ಟಿಯಿಂದ, ನಿರಪೇಕ್ಷೆಯಾದಂಥ ದೃಷ್ಟಿಯಿಂದ of objective ಆಗಿ ನೋಡತಕ್ಕ ಒಬ್ಬ ತಜ್ಞರು ಇದ್ದು ಅತನ ಸಲಹೆ ಪಡೆಯುವುದು ಅಗತ್ಯ ಎಂದು ನಮಗೆ ಕಂಡು ಬಂದಿದೆ. ಅನೇಕ ಸದಸ್ಯರು ಹೇಳಿದರು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಯಾರೂ ಇಲ್ಲವೇ, ಸೆಕ್ರೆಟರಿ ಇಲ್ಲವೇ, ಡೆಪ್ಯೂಟಿ ಸೆಕ್ರೆಟರಿ ಇಲ್ಲವೇ, ಫೈನಾನ್ಸ್ ಮಿನಿಸ್ಟರ್ ಇಲ್ಲವೇ ಎಂದು. ಯಾವುದೇ ಸಿಬ್ಬಂದಿ ಆಗಲಿ, ಅಥವಾ ಫೈನಾನ್ಸ್ ಮಿನಿಸ್ಟರ್ ಆಗಲಿ, ಅವರೆಲ್ಲಾ ಆಡಳಿತದ ಒಂದು ಭಾಗವಾಗಿದ್ದಾರೆ. ಅದರ ಒಂದು ಪಾರ್ಟಿ ಆಗಿದ್ದಾರೆ. ಆದುದರಿಂದ ಅನೇಕ ಸಂದರ್ಭಗಳಲ್ಲಿ ಡಿಪಾರ್ಟ್‌ಮೆಂಟಿನ ಮೇಲಕ್ಕೆ ಇವರು ನೋಡುವಂಥಾದ್ದು ಸಾಧ್ಯವಾಗಲಿಕ್ಕಿಲ್ಲ. ಸಂಪೂರ್ಣವಾದಂಥ ಆಬ್ಜಕ್ಟಿವ್ ದೃಷ್ಟಿ ಇಟ್ಟುಕೊಳ್ಳುವುದು ಅಷ್ಟು ಸುಲಭವಾದ ಕೆಲಸ ಅಲ್ಲ. ಆದುದರಿಂದ ಇದಕ್ಕಾಗಿ ನಾವು ಒಬ್ಬ ತಜ್ಞರನ್ನು ನೇಮಿಸಿಕೊಳ್ಳಬೇಕೆಂದು ನಿರ್ಧಾರ ಮಾಡಿದೆವು. ಅಪಾರವಾದ ಅಭ್ಯಾಸ ಮತ್ತು ಅನುಭವ ಇದ್ದಂಥ ಆರ್ಥಿಕ ಸಲಹೆಗಾರರು ಇದ್ದರೆ ಅವರಿಂದ ನಮ್ಮ ಸರ್ಕಾರಕ್ಕೆ ಮತ್ತು ನಮ್ಮ ರಾಜ್ಯಕ್ಕೆ ವಿಶೇಷವಾದ ಪ್ರಯೋಜನ ಇದೆ ಎಂದು ನಾನು ಇಲ್ಲಿ ಹೇಳಿ ಇದರ ಬಗ್ಗೆ ಏನು ಖರ್ಚು ಮಾಡುತ್ತೇವೆ, ಅದಕ್ಕಿಂತ ಎಷ್ಟೋಪಟ್ಟು ಪ್ರಯೋಜನ ಅವರ ಸೇವೆಯಿಂದ ಆಗುತ್ತದೆ.

ಇದಾದ ಮೇಲೆ ಜಿಲ್ಲಾ ಕೋರ್ಟುಗಳ ವಿಚಾರದಲ್ಲಿ ಕೆಲವು ಸದಸ್ಯರು ಟೀಕೆ ಮಾಡಿದರು. ನಿನ್ನೆ ಮುಖ್ಯ ಮಂತ್ರಿಗಳು ಚರ್ಚೆಯ ಮಧ್ಯದಲ್ಲಿ ಈ ವಿಚಾರವಾಗಿ ವಸ್ತುತ ಸ್ಥಿತಿಯನ್ನು ಹೇಳಿದ್ದಾರೆ. ಸಿವಿಲ್ ಕೋರ್ಟ್ಸ್ ಕಾಯಿದೆ ಪ್ರಕಾರ ಪ್ರತಿ ಜಿಲ್ಲೆಯಲ್ಲೂ ಒಂದೊಂದು ಡಿಸ್ಟ್ರಿಕ್ಟ್ಸ್ ಕೋರ್ಟನ್ನು ಸ್ಥಾಪನೆ ಮಾಡುವುದು ಅಗತ್ಯ ವಾಗಿದೆ ಮತ್ತು ಈಗ ಯಾವ ಜಿಲ್ಲೆಗಳಲ್ಲಿ ಯಾವ ಜಿಲ್ಲಾ ಕೋರ್ಟುಗಳನ್ನು ಸ್ಥಾಪನೆ ಮಾಡಿದ್ದೇವೋ, ಆಲ್ಲಿ ಜನರಿಂದ ಅನೇಕ ವರ್ಷದಿಂದ ಜಿಲ್ಲಾ ಕೋರ್ಟು ಆಗಬೇಕು ಎಂದು ಪುನಃ ಪುನಃ ಆಗ್ರಹವಾದ ಬೇಡಿಕೆ ಸರ್ಕಾರದ ಮುಂದೆ ಬರುತ್ತಾ ಇತ್ತು. ಆದುದರಿಂದ ಇದು ಜನರ ಬೇಡಿಕೆಯನ್ನು ಈಡೇರಿಸುವಂಥ ಒಂದು ಕೆಲಸ, ಅವಶ್ಯವಾದಂಥ ಕೆಲಸ. ಅದಕ್ಕೆ ಮಾಡಿದ ಖರ್ಚು ಅಪವ್ಯಯವಲ್ಲ ಎಂದು ನಾನು ಸಮರ್ಥಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇದಾದ ನಂತರ ಬೇಡಿಕೆ ನಂಬರ್ 21 ತೆಗೆದುಕೊಳ್ಳುತ್ತೇನೆ. ಈ ವಿಚಾರದಲ್ಲಿಯೂ ಕೂಡ ಕೆಲವು ಸದಸ್ಯರು ಮಾಡಿದಂಥ ಟೀಕೆ ಸಾಕಷ್ಟು ಇನ್‌ಫರ್ಮೇಷನ್ ಅಥವಾ ಸಾಕಷ್ಟು ತಿಳುವಳಿಕೆಯನ್ನು ಪಡೆದುಕೊಂಡು ಮಾಡಿದಂಥ ಟೀಕೆಯಲ್ಲ. ಅದರಲ್ಲಿ ಬಹಳ ಮುಖ್ಯವಾದ ಬಾಬು ಎಂದರೆ, ಪಂಪುಸೆಟ್ಟು

ಗಳಿಗೆ ಕೊಟ್ಟಂಥ ಹಣ, ಒಂದು ಕೋಟಿ 45 ಲಕ್ಷ ರೂಪಾಯಿ. ನಮ್ಮ ರಾಜ್ಯದಲ್ಲಿ ಅನಾವೃಷ್ಟಿಯಿಂದ ಕ್ಷೋಭೆ ಉಂಟಾದಾಗ ಜಮೀನಿಗೆ ಬೀಜ ಹಾಕಿ ಪೀಕ್ ಬಂದಾಗ ಮಳೆ ಇಲ್ಲದೇ ಪೈರು ಒಣಗಿ ಹೋದ ಪರಿಸ್ಥಿತಿ ಬಂದಾಗ ತಕ್ಷಣ ಸರ್ಕಾರ ಕ್ರಮ ತೆಗೆದುಕೊಂಡು 45 ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ಡಿವಿಷನ್ ಕಮೀಷನರಿಗೆ ಕೊಟ್ಟಿತು. ಆ ಹಣವನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಟ್ಟು ತಾಲ್ಲೂಕು ಬೋರ್ಡುಗಳು ಪಂಪು ಸೆಟ್ಟು ಖರೀದಿ ಮಾಡಿ ಸಹಸ್ರಾರು ಎಕರೆ ಪೀಕನ್ನು ಉಳಿಸಿದ್ದಾರೆ. ಶ್ರೀಮಾನ್ ಕೆ. ಪಿ. ರೇವಣಸಿದ್ದಪ್ಪನವರು ಎಲ್ಲಿ ಉಳಿಸಿದ್ದಾರೆ, ನನಗೆ ಕಾಣಲಿಲ್ಲ ಎಂದು ಹೇಳಿದರು. ನನ್ನ ಜೊತೆಗೆ ಅವರನ್ನು ಕರೆದುಕೊಂಡು ಹೋಗುತ್ತೇನೆ. ಅವರ ಜಿಲ್ಲೆಯಿಂದ ಹಿಡಿದು, ಎಲ್ಲಾ ತಾಲ್ಲೂಕು ಬೋರ್ಡುಗಳ ಪರಿಚಯ ಮಾಡುತ್ತೇನೆ. ಆಗ ಅವರೇ ಹೇಳುತ್ತಾರೆ ಎಷ್ಟು ಶಿಲಕು ಇದರಿಂದ ಉಳಿದಿದೆ ಎಂದು, ಈ ಒಂದು ಕ್ರಮದಿಂದ ಅನೇಕ ಕಡೆಗೆ ಅತಿ ಶೀಘ್ರ ವಾಗಿ ಫಲ ಸಿಕ್ಕಿದೆ. ಇದಕ್ಕಾಗಿ ತಾಲ್ಲೂಕು ಬೋರ್ಡಿನವರಿಗೂ ಈ ವಿಷಯದಲ್ಲಿ ಅಭಿನಂದನೆಗಳನ್ನು ಕೊಡು ತ್ತೇನೆ. ಅವರೂ ಕೂಡ ತ್ವರಿತವಾಗಿ ಕೆಲಸ ಮಾಡಿದ್ದಾರೆ. ಅದಲ್ಲದೆ ಒಂದು ಕೋಟಿ ರೂಪಾಯಿಗಳನ್ನು ಪಂಪು ಸೆಟ್ಟುಗಳನ್ನು ಹಂಚುವುದಕ್ಕಾಗಿ ಖರ್ಚುಮಾಡಬೇಕು ಎಂದು ನಿರ್ಧರಿಸಿದ್ದೇವೆ. ಆ ಪಂಪು ಸೆಟ್ಟುಗಳ ಹಂಚುವಿಕೆಯಲ್ಲಿ ಹಿಂದೆ ಯಾವ ಯಾವ ತೊಂದರೆ ತೊಡಕುಗಳು ಇತ್ತೋ ಆ ತೊಂದರೆ ತೊಡಕುಗಳನ್ನು ತೆಗೆದುಹಾಕಿ ಬಹಳ ಸುಲಭವಾದ ರೀತಿಯಲ್ಲಿ ಅತಿ ಶೀಘ್ರವಾಗಿ ಯಾವುದೇ ರೀತಿಯ ಕಾಂಪ್ಲಿಕೇಷನ್ಸ್ ಇಲ್ಲದೆ, ರೈತರಿಗೆ ಪಂಪು ಸೆಟ್ಟುಗಳನ್ನು ಹಂಚುವ ಹೊಸ ವ್ಯವಸ್ಥೆಯನ್ನು ಮಾಡಿದ್ದೇವೆ. ಆದುದರಿಂದ ಇದರ ಬಗ್ಗೆ ಟೀಕೆ ಮಾಡುವಂಥಾದ್ದು ಅಷ್ಟೇನೂ ಸಮಂಜಸವಲ್ಲ ಎಂದು ನನ್ನ ಭಾವನೆ.

ಅಧ್ಯಕ್ಷರೇ, ಮತ್ತೊಂದು ವಿಚಾರದ ಬಗ್ಗೆ ಬಹಳಷ್ಟು ಟೀಕೆ ಬಂದಿರುವಂಥಾದ್ದು ಗೋವಾದಲ್ಲಿ ಮತ್ತು ಡಿಲ್ಲಿಯಲ್ಲಿ ರಾಜ್ಯ ಸರ್ಕಾರ ವಾರ್ತಾ ಕೇಂದ್ರ ಮತ್ತು ಟೂರಿಸ್ಟ್ ಆಫೀಸ್ ಸ್ಥಾಪನೆ ಮಾಡಿರುವುದರ ಬಗ್ಗೆ. ಬಹುಶಃ ಟೀಕೆ ಮಾಡಿದ ಮಾನ್ಯ ಸದಸ್ಯರು ಅದರ ಮಹತ್ವವನ್ನು ಅರಿತು ಮಾಡಲಿಲ್ಲ. ಡೆಲ್ಲಿಯಲ್ಲಿ ಬೇರೆ ಬೇರೆ ಎಲ್ಲಾ ರಾಜ್ಯಗಳ ವಾರ್ತಾ ಮತ್ತು ಪ್ರಸಿದ್ಧಿ ಕೇಂದ್ರ ಇವೆ. ಮಹಾರಾಷ್ಟ್ರದ್ದು ಇದೆ. ಗುಜರಾತಿನದ್ದು ಇದೆ, ಬಿಹಾರಿನದ್ದು ಇದೆ, ಯು. ಪಿ. ದು ಇದೆ ಹೀಗೆ ಬೇರೆ ಬೇರೆ ರಾಜ್ಯಗಳದ್ದೂ ಇವೆ. ಆಯಾಯ ರಾಜ್ಯಗಳಿಗೆ ಕೇಂದ್ರದಲ್ಲಿ ಮತ್ತು ನಮ್ಮ ರಾಜಧಾನಿಯಲ್ಲಿ ಹೆಚ್ಚು ಪ್ರಭಾವ ಆವರ ಬಗ್ಗೆ ಪ್ರಚಾರ ಬೆಳೆದು ಬಂದಿದ್ದರೆ, ಅದು ಆ ಕೇಂದ್ರಗಳ ಮುಖಾಂತರ. ನಮ್ಮ ಮೈಸೂರಿನ ನಕಾಶೆ ನಮ್ಮ ರಾಜಧಾನಿಯಲ್ಲಿ ನಾವು ಮಾಡಿಸಬೇಕು ಮತ್ತು ನಮ್ಮ ಮೈಸೂರು ರಾಜ್ಯದಲ್ಲಿ ಯಾವ ಯಾವ ಹೊಸ ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇವೆ ಎಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ, ಮೈಸೂರಿನ ಐತಿಹಾಸಿಕ, ಸಾಂಸ್ಕೃತಿಕ ಮತ್ತು ನೈಸರ್ಗಿಕ ಸಂಪತ್ತು ಏನು ಎನ್ನುವುದನ್ನು ತಿಳಿಸುವುದಕ್ಕೂ ಇಂತಹ ಒಂದು ಕೇಂದ್ರದ ಅಗತ್ಯ ಬಹಳ ಇತ್ತು. ಅದನ್ನು ನಾವು ಸ್ಥಾಪನೆ ಮಾಡಿದ್ದೇವೆ. ಇದರ ಬಗ್ಗೆ ನಾವು ಎಷ್ಟು ಹಣವನ್ನು ಖರ್ಚು ಮಾಡಿದರೂ ಕೂಡ, ಅದು ಯೋಗ್ಯವಾದುದು ಎಂದು ನನ್ನ ಅಭಿಪ್ರಾಯ. ಮೈಸೂರಿನ ಲಾಬಿ ಡೆಲ್ಲಿಯಲ್ಲಿ ಇಲ್ಲದೇ ಹೋದರೆ ಮೈಸೂರಿನ ವಿಚಾರದಲ್ಲಿ ಸಾಕಷ್ಟು ಮಾಹಿತಿ, ತಿಳುವಳಿಕೆ ಮತ್ತು ಪ್ರಚಾರ ಮಾಡತಕ್ಕಂಥ ಕೇಂದ್ರ ಇಲ್ಲದಿದ್ದರೆ, ಅದರಿಂದ ನಮಗೆ ಅನಿಷ್ಟ ಮತ್ತು ಹಾನಿಯಾಗುತ್ತದೆ, ಲಾಭವಾಗುವುದಿಲ್ಲ.

11-30 A.M.

ಮತ್ತು ಈ ವರ್ಷ ಗೋವಾದಲ್ಲಿ ಸ್ಥಾಪನೆ ಮಾಡಿದಂತಹ ಟೂರಿಸ್ಟ್ ಆಫೀಸಿನಿಂದ ಬಹಳ ಮಹತ್ವದ ಕೆಲಸವನ್ನು ನಾವು ಮಾಡಿದ್ದೇವೆಂದು ನನ್ನ ಅಭಿಪ್ರಾಯ. ಮೈಸೂರಿನ ಜನಗಳಿಗೂ ಮತ್ತು ಗೋವಾ-ಜನಗಳಿಗೂ ಅನ್ಯೋನ್ಯವಾಗಿ ಸಂಬಂಧವನ್ನು ಬೆಳೆಸುತ್ತಾ ಬರಬೇಕಾದ್ದು ಅತ್ಯಗತ್ಯ. ಅಲ್ಲಿಯ ಜನತೆಗೆ ಮುಖ್ಯವಾಗಿ ಗೋವಾಕ್ಕೆ ಹತ್ತಿರ ಇರುವಂಥ ಮೈಸೂರು ಪ್ರದೇಶದಲ್ಲಿರತಕ್ಕ ಜನಗಳಿಗೆ ಒಳ್ಳೆಯ ರೀತಿಯ ಅನ್ಯೋನ್ಯತೆ ಇವೆ ಭಾಷೆ ಒಂದೇ ಆಚಾರ ವಿಚಾರ ಒಂದೇ ಮತ್ತು ಅನೇಕ ರೀತಿಯ ಅನ್ಯೋನ್ಯ ಜನತೆಯಲ್ಲಿ ಇದೆ.

